ಸ್ವಾಮಿ, ಮೈಸೂರು ರಾಜ್ಯದಲ್ಲಿ ಸೇವೆ ಮಾಡತಕ್ಕ ನೌಕರರು ಮುಷ್ಕರ ಮಾಡುವುದು ಎಂದರೆ ಇದರಲ್ಲಿ ಏನು ಅರ್ಥ ಹೇಳುತ್ತಾರೆ ಎಂದರೆ, ಕೆಲಸವನ್ನು ನಿಲ್ಲಿಸುವುದು ಅಥವ including any unauthorised absence from duty, ಒಂದು ದಿವಸ ಕ್ಯಾಷುಯಲ್ ರಜಾ ಹಾಕುವುದೂ ಸಹ ಮುಷ್ಕರವಾಗುತ್ತದೆ, ನೌಕರರು ಈ ರೀತಿಯಾದ ಕ್ರಮವನ್ನು ತೆಗೆದುಕೊಂಡರೆ ಅದು ದೊಡ್ಡ ತಪ್ಪಾಗುತ್ತದೆ, ಅವರು ಶಿಕ್ಷಗೆ ಗುರಿಯಾಗುತ್ತಾರೆ: ಈ ಒಂದು ಅಧಿನಿಯಮದ ಪ್ರಕಾರ ಅಂತಹ ಎಲ್ಲಾ ಕೃತಿಗಳನ್ನು ನಾವು ನಿಷೇಧಿಸಿದ್ದೇವೆಂದು ಹೇಳುತ್ತಾರೆ. ಈ ಆರ್ಡಿನೆನ್ಸ್‌ನಲ್ಲಿ 3ನೇ ಕ್ಲಾಜಿನಲ್ಲಿ "No State civil servant shall resort to strike" ಎಂದು ಹೇಳುತ್ತಾರೆ. ಹಾಗೆ ಏನಾದರೂ ಮಾಡಿದ್ದೇ ಅದರೆ ಅವನನ್ನು ಈ ಆರ್ಡಿನೆನ್ಸ್ 4ನೇ ಸೆಕ್ಷನ್ ಪ್ರಕಾರ ... ...shall be punished with imprisonment for a term which may extend to six months or with fine which may extend to five hundred rupees or with both, ಅವನು ಇನ್ನು ಯಾವತ್ತೂ ಸರ್ಕಾರಿ ನೌಕರನಾಗಿ ಸರ್ವಿಸ್ಸಿಗೆ ಲಾಯಕ್ಕಾಗಬಾರದು ಎನ್ನುವ ರೀತಿಯಲ್ಲಿ ಉಗ್ರವಾದ ಶಿಕ್ಷೆಯನ್ನು ವಿಧಿಸಲಾಗುವುದು ಎಂದು ನಮೂದಿಸಿ ಈ ಆಜ್ಞೆಯನ್ನು ಹೊರಡಿಸಿದ್ದಾರೆ. ಮಾನ್ಯ ಗೃಹ ಮಂತ್ರಿಗಳು ಈ ಒಂದು ಅಧಿನಿಯಮದ ಕರ್ತೃ ಎಂದು ಕಾಣುತ್ತದೆ. ಅವರು ಇಲ್ಲಿ ಹಾಜರಿದ್ದಾರೆ. ಆದ್ದರಿಂದ ಅವರ ಮೇಲೆ ಈ ಅಪಾದನೆ ಮಾಡುತ್ತಿದ್ದೇನೆ. ಅವರು ಅಲ್ಲ ಎಂದು ಹೇಳಿದರೆ ಅಲ್ಲ ಎಂದು ಹೇಳಲಿ, ಹೌದು ಎಂದು ಹೇಳಿದರೆ ಹೌದು ಎಂದು ಹೇಳಲಿ, ಏಕೆಂದರೆ, ಇದು ಮುಂದೆ ಬರುತ್ತಿರುವ ಪೋಲೀಸ್ ರ್‍ಯಾಜದ ಸಂಕೇತವೋ ಏನೋ ಗೊತ್ತಿಲ್ಲ. ಪೋಲೀಸ್ ರಾಜ್ಯ ಕ್ರಮೇಣ ಬರುತ್ತದೆ. ಅದಕ್ಕೆ ಇದು ಮೊದಲ ತರತಕ್ಕ ಒಂದು ಕೃತಿಯೋ ಎಂದು ನನಗೆ ಇರುವ ಭಯ ಅಥವಾ ಶಂಕೆ ಇದರಲ್ಲಿ ಉಗ್ರವಾಗಿ ಶಿಕ್ಷೆಮಾಡುವುದು ಇದೆ. ಒಂದು ದಿವಸ ರಜ ಹಾಕುವುದನ್ನು ಕೂಡ ಸರ್ಕಾರದವರು ಸಾಮೂಹಿಕವೆಂದು ಪರಿಗಣಿಸಿ ಅದನ್ನು ಪೂರ್ವಭಾವಿಯಾಗಿ ನಿಯೋಜಿತ ಮುಷ್ಕರವೆಂದು ಪರಿಗಣಿಸಿ ಅದನ್ನು ಪೂರ್ವಭಾವಿಯಾಗಿ ನಿಯೋಜಿತ ಮುಷ್ಕರವೆಂದು ತೀರ್ಮಾನ ಮಾಡುವುದೇ ಆದರೆ, ಅದರ ಅರ್ಥವೂ ಕೂಡ ಅವನನ್ನು ಶಿಕ್ಷೆಗೆ ಗುರಿಪಡಿಸುವುದೇ ಆಗಿದೆ. ಆತನು ಸರ್ಕಾರಿ ನೌಕರನಾಗುವುದಕ್ಕೆ ಅರ್ಹತೆ ಇರಬಾರದು, ಇದು ಒಂದು ಶಿಕ್ಷೆಯ ಕ್ರಮವನ್ನು ಅಧಿನಿಯಮದಲ್ಲಿ ಸೇರಿಸಿದ್ದಾರೆ.

ಎರಡನೆಯದಾಗಿ, ನಮ್ಮ ಸರ್ಕಾರಿ ನೌಕರರು ನಮ್ಮಂತಹವರನ್ನು ಅಕಸ್ಮಾತ್ ಸರ್ಕಾರಿ ನೌಕರರ ಸಭೆ ಅಥವಾ ಅಸೋಸಿಯೇಷನ್ ಅಥವಾ ಯೂನಿಯನ್‌ಗೆ ಕರೆದಾಗ ನಾವು ಅಲ್ಲಿ ಹೋಗಿ

ಭಾಷಣಮಾಡಿ ನಿಮ್ಮ ಬೇಡಿಕೆಗಳು ನ್ಯಾಯವಾಗಿವೆ, ಸರ್ಕಾರದವರು ಹೇ ಕಮಿಷನ್ ನೇಮಕ ಮಾಡುವುದು ಅಗತ್ಯ, ತುಟ್ಟಿ ದಿನಗಳಲ್ಲಿ ಹೆಚ್ಚು ಭತ್ಯ ಸಿಕ್ಕುವುದು ಅವಶ್ಯಕ ನೀವು ಮಾತನಾಡಿ, ಅದಕ್ಕಾಗಿ ಹೋರಾಡಬೇಕು ಎಂದು ಹೇಳಿದರೂ ಅದೂ ಹೋರಾಟವಾಗುತ್ತದೆ. ಹೋರಾಟ ಎಂಬ ಪದದ ಅರ್ಥ ಹೇಳಬೇಕಾದರೆ ಅದು ವ್ಯಾಪಕವಾಗಿ ಆಗುತ್ತದೆ, ಅಥವಾ ಸಂಕುಚಿತವಾಗುತ್ತದೆ. ಆದ್ದರಿಂದ ವಿಶೇಷವಾಗಿ ಹೇಳುವುದಿಲ್ಲ. ಇಂದು ಕುಳಿತಿದ್ದವನು ಎದ್ದು ನಿಂತರೆ ಅದೇ ಹೋರಾಟ, ಘೋಷಣೆ ಹಾಕಿದರೆ ಅದೂ ಹೋರಾಟವೇ, ಧಿಕ್ಕಾರ ಮಾಡುವುದು ಪರಮಾವಧಿ ಹೋರಾಟ, ಅವರು ಏನಾದರೂ ಕಚೇರಿಯಿಂದ ನಡೆದುಕೊಂಡು ಅಕೌಂಟೆಂಟ್ ಜನರಲ್ ಆಫೀಸಿಗೆ ಬಂದು ನಿಂತಾಗ ಅವರನ್ನು ಪೋಲೀಸಿನವರು ವಾಪಸು ಕಳುಹಿಸಿದರೆ ಅದು ಕ್ರಾಂತಿಯಲ್ಲಿ ಒಂದು ಘಟ್ಟ. ಆ ರೀತಿಯಾಗಿ ಹೋರಾಟ ಎನ್ನುವ ಶಬ್ದದಲ್ಲಿ ಒಂದು ಅರ್ಥವಿದೆ. ಹೋರಾಟ ಹೂಡಬೇಕು, ಅದನ್ನು ನಡೆಸತಕ್ಕದ್ದು ಸರಿ ಎಂಬುದಾಗಿ ನನ್ನಂತಹವನು ಒಬ್ಬ ನಾಗರಿಕನಾದವನು ಹೇಳಿದರೆ ಅದಕ್ಕೂ ಶಿಕ್ಷೆ ಮಾಡುವಂಥಾದ್ದನ್ನು ಒಂದು ಕ್ರಮವೆಂದು ಹೇಳುತ್ತಾರೆಯೇ? ಈ ಮಸೂದೆಯ 5ನೇ ಕ್ಲಾಜಿನಲ್ಲಿ ಈ ರೀತಿ ಇದೆ :

> "Any person who instigated or incites State civil servants to take part in, or otherwise acts in furtherance of a strike, shall be punished with imprisonment for a term which may extend to one year or with fine which may extend to one thousand rupees or with both"

ಈ ದೇಶದಲ್ಲಿ ಅವರು ಹೇಳುತ್ತಿದ್ದಾರೆ, ಸರ್ಕಾರಿ ನೌಕರರಿಗೆ ಎಲ್ಲಾ ಹಕ್ಕುಗಳನ್ನೂ ಕೊಡುವುದಕ್ಕಾಗುವುದಿಲ್ಲ; ಅವರ ಹಕ್ಕುಗಳನ್ನು ನಾವು ಮೊಟಕುಮಾಡುತ್ತೇವೆ, ವಿವೇಕಯುತವಾದ ರೀತಿಯಲ್ಲಿ ಮೊಟಕುಮಾಡುತ್ತೇವೆ, ಈಗಾಗಲೇ ಎಷ್ಟೋ ಹಕ್ಕುಗಳನ್ನು ಮೊಟಕು ಮಾಡುತ್ತಾ ಬಂದಿದ್ದೇವೆಂದು ಹೇಳುತ್ತಾರೆ. ನಾಗರೀಕರು ಯಾರೇ ಆಗಲೀ ಅವರ ಮೂಲಭೂತವಾದ ಹಕ್ಕುಗಳನ್ನು ನ್ಯಾಯಾಲಯಗಳು ಕಾಪಾಡುತ್ತವೆ. ಈಗ ಹೇಬಿಯಸ್ ಕಾರ್ಪಸ್, ರಿಟ್ ಆಫ್ ಮ್ಯಾಂಡಮಸ್ ಎಂದು ಏನು ಹೇಳುತ್ತಾರೆ, ಅದರಲ್ಲಿ ನಿಮ್ಮ ಹಕ್ಕುಗಳನ್ನು ಕಾರ್ಯಾಂಗ ಮತ್ತು ಶಾಸಕಾಂಗಗಳಲ್ಲಿಯೂ ಮೊಟಕುಮಾಡುವುದಕ್ಕೆ ಬಿಡುವುದಿಲ್ಲವೆಂದು ಗ್ಯಾರಂಟಿ ಕೊಟ್ಟಿದ್ದಾರೆ. ಅಂತಹ ಹಕ್ಕುಗಳನು ರಾಜ್ಯಪಾಲರು ರಾಜ್ಯಾಂಗದಲ್ಲಿ ಮತ್ತು ಶಾಸಕಾಂಗಗಳಲ್ಲಿ ಮೊಟಕುಮಾಡುತ್ತೇವೆಂದು ಹೇಳಿರುವುದು ಹೇಗಿದೆಯೆಂದರೆ, ಬಾಲವೇ ನಾಯಿಯನ್ನು ಅಲ್ಲಾಡಿಸುವ ಪರಿಸ್ಥಿತಿಯಾಗಿದೆ. ಇದು ತಲೆಕೆಳಗು ಸ್ಥಿತಿ. ಇದು ಒಂದು ವಿಪರ್ಯಾಸವೆಂದು ನಾನು ಕರೆಯುತ್ತೇನೆ. ಈ ಮಸೂದೆಯಲ್ಲಿ ಏನೇನು ಆಜ್ಞೆಗಳನ್ನು ಮಾಡಬೇಕು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ರಾಜ್ಯ ಸರ್ಕಾರ ಇಕ್ಕಟ್ಟಿನಲ್ಲಿ ಇರಬಹುದು, ಈ ರಾಜ್ಯ ಸರ್ಕಾರ ಹಣಕಾಸಿನ ಕೊರತೆಯನ್ನು ಎದುರಿಸಿರಬಹುದು. ಈ ರಾಜ್ಯ ಸರ್ಕಾರ ತಮ್ಮ ನೌಕರರ ಬೇಡಿಕೆಗಳನ್ನು ಈಡೇರಿಸದ ಪರಿಸ್ಥಿತಿಯಲ್ಲಿ ಇರಬಹುದು, ರಾಜ್ಯ ಸರ್ಕಾರದಲ್ಲಿ ಇನ್ನು ಏನೇನೋ ತೊಡಕುಗಳು ಇರಬಹುದು, ಅಂದಮಾತ್ರಕ್ಕೇ ಈ ರಾಜ್ಯದಲ್ಲಿ ನ್ಯಾಯಕ್ಕೆ ಬದಲು ದೊಣ್ಣೆ ನಮ್ಮ ಹತ್ತಿರವಿದೆ ಆ ಶಕ್ತಿ ನಮ್ಮಲ್ಲಿದೆ ಆ ಒಂದು ಬಲದಿಂದ ತುಳಿಯುತ್ತೇವೆಂದು ಹೇಳುವುದು ಸರಿಯೇ ಎಂದು ಗೃಹಮಂತ್ರಿಗಳನ್ನು ಕೇಳುತ್ತೇನೆ. ಅನ್ನ ಕೇಳಿದರೆ, ತುಟ್ಟಿ ಭತ್ಯ ಕೇಳಿದರೆ, ಜೀವನವೆಚ್ಚದ ಕೂಲಿ ಕೇಳಿದರೆ ಅವನಿಗೆ ದೊಣ್ಣೆ ತೋರಿಸುತ್ತಿದ್ದಾರೆ ಅವನ ತಲೆ ಹೊಡೆಯುತ್ತೇನೆಂದು ಹೇಳುತ್ತಿದ್ದಾರೆ, ಅವನನ್ನು ಕಾರಾಗೃಹಕ್ಕೆ ಹಾಕುತ್ತೇನೆಂದು ಹೇಳುತ್ತಾರೆ. ಇಂಥಾದ್ದನ್ನು ನಾಗರೀಕರು ಕೇಳುವುದಕ್ಕೆ ಭಯಪಡುತ್ತಾರೆ. ಅವರು ನಿಮ್ಮ ಸರ್ಕಾರದ ಮೇಲೆ ದಂಗೆ ಏಳಲಿಲ್ಲ. ನಿಮ್ಮನ್ನು ಕಿತ್ತುಹಾಕುತ್ತೇವೆಂದು ಹೇಳಲಿಲ್ಲ. ಇಲ್ಲದಿದ್ದರೆ ಇನ್ನಾವ ಸವಾಲೂ ಹಾಕಲಿಲ್ಲ. ಅವರು ಕೇಳಿದ್ದು ತುಟ್ಟಿ ಭತ್ಯ. ನಾಗರೀಕರಾಗಿ ಕೆಲವು ಬೇಡಿಕೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದರ ಪ್ರಕಾರ ನಮಗೆ ಸಾಕಷ್ಟು ಸಂಬಳವನ್ನು ಈಗಿನ ಕಾಲದಲ್ಲಿ ಕೊಡಿ ಎಂದು ಕೇಳಿದ್ದಾರೆ. ಅದಕ್ಕೆ ಈ ರಾಜ್ಯ ಸರ್ಕಾರ ಬಹುಶಃ ಲಕ್ನೋ ಘಟನೆಯನ್ನು ಜ್ಞಾಪಿಸಿಕೊಂಡು ಭಯಪಟ್ಟೋ ಅಥವಾ ಮತ್ತೆ ಯಾವುದೋ ಸಂಘಟನೆ ನೋಡಿ ಭಯಪಟ್ಟೋ ಅಥವಾ ಕಲ್ಕತ್ತಾದಲ್ಲಿ ಆಗಿಹೋಗಿರತಕ್ಕ ಸಮಸ್ಯೆಗಳನ್ನು ನೋಡಿ, ಇನ್ನು ಏನೋ ಕಾರಣಗಳಿಂದ ಇಂತಹ ಕರಾಳ ಆಜ್ಞೆಯನ್ನು ರಾಜ್ಯಪಾಲರ ಮೂಲಕ ರಾಜ್ಯ ಸರ್ಕಾರದವರು ಹೊರಡಿಸಿದ್ದಾರೆ. ಇದು ತೀರಾ ಖಂಡನೀಯವಾದ ಕೃತಿ. ಇದನ್ನು ಯಾವ ನಾಗರೀಕನೂ ಕೂಡ ಇಂತಹ ಸ್ವತಂತ್ರ ದೇಶದಲ್ಲಿ ಒಪ್ಪಲಾರ ಮತ್ತು ಅಂಗೀಕರಿಸಲಾರನು. ಆದ್ದರಿಂದ ಈ ಒಂದು ಅಧಿನಿಯಮವನ್ನು ಅಥವಾ ಸುಗ್ರೀವಾಜ್ಞೆಯನ್ನು ರಾಜ್ಯಪಾಲರು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಈ ಮೂಲಕ ಒತ್ತಾಯಪಡಿಸುತ್ತೇನೆ.

† ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು).—ಅಧ್ಯಕ್ಷರೇ, ಶ್ರೀಮಾನ್ ಎಸ್. ಗೋಪಾಲಗೌಡರು ತಂದಿರತಕ್ಕ ನಿರ್ಣಯವನ್ನು ಅನುಮೋದಿಸಿ ನಾನು ಒಂದೆರಡು ವಿಷಯಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ಬಯಸುತ್ತೇನೆ. ನಮ್ಮ ಪವಿತ್ರ ಘಟನೆ, ನಮ್ಮ ಪ್ರಜಾಪ್ರಭುತ್ವ ನಮ್ಮ ದೇಶದ ಜನತೆಯ ಸಮಾಜವಾದೀ ಸಮಾಜರಚನೆಯಿಂದ ಈ ರಾಜ್ಯವನ್ನು ಸುಖೀರಾಜ್ಯ ಮಾಡದೆ ಇರುವುದರಿಂದ ಆಳುವವರು ಗೆಲ್ಲಲಿ ಎಂದು ಜನರು ಹೇಳುವ ರೀತಿಯಲ್ಲಿ ಮುಂದುವರಿಯುವ ರಾಜ್ಯವಾಗಿರುವುದರಿಂದ, ಸರ್ಕಾರದವರು ಈ ಒಂದು ಸುಗ್ರೀವಾಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ, ಅದರ ಜೊತೆಗೆ ಈಗ ತಂದಿರತಕ್ಕ ಮಸೂದೆಯನ್ನು ಒತ್ತಾಯವಾಗಿ ಮುಂದುವರಿಸಬಾರದು ಎಂದು ಹೇಳಿ ಮೊಟ್ಟಮೊದಲನೆಯದಾಗಿ ವಿಜ್ಞಾಪಿಸಿ ಒಂದೆರಡು ವಿಷಯಗಳನ್ನು ತಮ್ಮ ಮುಂದಿಡಲು ಬಯಸುತ್ತೇನೆ.

ಈಗ ಶ್ರೀ ಗೋಪಾಲಗೌಡರು ಮಾತನಾಡುವಾಗ ಹೇಳಿದರು, ಇದು ಒಂದು ಕರಾಳಶಾಸನ, ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಶಾಸನ ಎಂದು. ನಮ್ಮ ರಾಜ್ಯಾಂಗದಲ್ಲಿ ಮೂಲಭೂತವಾದ ಹಕ್ಕುಗಳನ್ನು ಮೊಟಕು ಮಾಡುವ ಸುಗ್ರೀವಾಜ್ಞೆ ಮತ್ತು ಶಾಸನವಾದುದರಿಂದ ಇದನ್ನು ತರಬಾರದು ಎಂದು ನಾನು ಹೇಳುತ್ತೇನೆ. ನಿಜವಾಗಿ ಇಂದಿನ ಕಾಂಗ್ರೆಸ್ ಸರ್ಕಾರವು ಯಾವ ದಾರಿಯಲ್ಲಿ ಜನತೆಯಿಂದ ದೂರ ಆಗಲಿಕ್ಕೆ ಹಿಟ್ಲರ್‌ಶಾಹಿ ಸರ್ಕಾರ ಆಗಲಿಕ್ಕೆ ಪ್ರಯತ್ನ ನಡೆಸುತ್ತಿದ್ದಾರೆಯೋ ಅದಕ್ಕೆ ಈ ಒಂದು ಸುಗ್ರೀವಾಜ್ಞೆ ಸಂಕೇತ ಎಂದು ಕಾಣುತ್ತದೆ. ಪ್ರಜಾಪ್ರಭುತ್ವವನ್ನು ಬಿಟ್ಟು ತಮ್ಮ ಪಾರ್ಟಿ ಸರ್ಕಾರವನ್ನು ನೆಲೆಯಾಗಿ ನಿಲ್ಲಿಸಲಿಕ್ಕೆ ಬೇಕಾದ ಜನತೆಯ ಅಭಿಪ್ರಾಯವನ್ನು ಮರೆತು, ಜನತೆಯ ಕೇಳಿಕೆಗಳಿಗೆ ತಿರಸ್ಕಾರ ಕೊಟ್ಟು ತಮಗೆ ಬೇಕಾದ ಆಜ್ಞೆಗಳ ಮೂಲಕ ಆಳುವ ಸ್ಥಿತಿಗೆ ಬರುತ್ತಾರೆ. ಅದಕ್ಕೆ ಬೇಕಾದ ಆಜ್ಞೆಗಳನ್ನು ತರುತ್ತಾರೆ ಎನ್ನುವುದೇ ಇದಕ್ಕೆ ಕಾರಣ ಎಂದು ನನ್ನ ಅಭಿಪ್ರಾಯ. ಏತಕ್ಕೆಂದರೆ, ನಾವು ಪ್ರಜಾಪ್ರಭುತ್ವ ಸರ್ಕಾರಗಳ ಹೆಸರನ್ನು ಹೇಳುತ್ತೇವೆ. ಇಂಗ್ಲಿಷ್ ಪಾರ್ಲಿಮೆಂಟನ್ನು ಕೊಂಡಾಡುತ್ತೇವೆ. ಅಲ್ಲಿ ಸರ್ಕಾರಿ ನೌಕರರಿಗೆ ಅವರ ಕೇಳಿಕೆಗಳನ್ನು ಪರಿಶೀಲಿಸಿ ಅವರಿಗೆ ಬೇಕಾದ ರೀತಿಯಲ್ಲಿ ಪರಿಹಾರ ನೀಡಲಿಕ್ಕೆ ವಿಟ್ಲೀ ಕೌನ್ಸಿಲ್ ಎನ್ನುವ ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ, ಅದು ಸರ್ಕಾರದ ಅಧೀನದಲ್ಲಿಲ್ಲ. ಅದು ಪಾರ್ಲಿಮೆಂಟಿಗೆ ಅಧೀನವಾದುದು. ಅಂತಹ ಒಂದು ಕಮಿಟಿ ನೇಮಕ ಮಾಡಿ ಅವರ ಸಮಸ್ಯೆಗಳನ್ನು ಪರಿಹಾರ ಮಾಡುತ್ತಾರೆ. ಆ ರೀತಿ ಪರಿಹಾರವನ್ನು ಪಡೆಯುವುದೂ ಅಲ್ಲಿನ ಸರ್ಕಾರಿ ನೌಕರರಿಗೆ ಸಾಧ್ಯ ಇದೆ. ಅದೇರೀತಿ ಫ್ರಾನ್ಸ್‌ನಲ್ಲೂ ಮಾಡಿದ್ದಾರೆ, ಐರ್ಲೆಂಡ್‌ನಲ್ಲೂ ಮಾಡಿದ್ದಾರೆ. ಬೇರೆ ಬೇರೆ ರಾಜ್ಯಗಳಲ್ಲೂ ಸರ್ಕಾರೀ ನೌಕರರಿಗೆ ಆಯಾಯ ಕಾಲಕ್ಕೆ ಬರುವ ಪ್ರಶ್ನೆಗಳನ್ನು ಪರಿಹರಿಸಲಿಕ್ಕೆ ಪ್ರತ್ಯೇಕವಾಗಿ ಸರ್ವಸ್ವತಂತ್ರವಾದ ಒಂದು ಸಮಿತಿಯನ್ನು ರಚಿಸಿ ಅದರ ಮೂಲಕ ಪರಿಹಾರ ಮಾಡುತ್ತಾರೆ. ಆದರೆ ಇಲ್ಲಿ ಏನು ಇದೆ? ಎನ್.ಜಿ.ಒ.ಗಳ ಬೇಡಿಕೆಗಳನ್ನು ಪರಿಹರಿಸಲಿಕ್ಕೆ ಯಾವ ಒಂದು ಬಾಡಿ ಇದೆ? ಯಾವುದೂ ಇಲ್ಲ. ಹೀಗಿರುವಾಗ ಅವರು ನ್ಯಾಯವಾದ ಕೇಳಿಕೆಗಳನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಸರ್ಕಾರದ ಮುಂದಿಟ್ಟು ಅದನ್ನು ಪರಿಹರಿಸಲಿಕ್ಕೆ ಬೇಕಾದ ಮನವಿಗೆ ಕೆಲವು ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಅದರಿಂದ ಅವರ ಸಮಸ್ಯೆ ಪರಿಹಾರವಾಗದೆ ಕಡೆಗೆ ಯಾವ ಬೇರೆ ಉಪಾಯವೂ ಇಲ್ಲದೆ ಇದನ್ನು ಒಂದೇ ಒಂದು ಉಪಾಯ ಉಳಿದಿದೆ; ಅದು ಶಾಂತಿಯಾಗಿ ಒಂದು ರೀತಿಯ ಸಂಪು ಅಥವಾ ಹೋರಾಟ ಎಂದು ಅದನ್ನು ನಡೆಸಿದರೆ ಅದರಲ್ಲಿ ತಪ್ಪು ಉಂಟೆ? ಈಗ ಸರ್ಕಾರ ಮಾಡಿರುವುದಕ್ಕೆ ಮಾನವೀಯತೆಗೆ ಮತ್ತು ಅವರ ಸ್ವತಂತ್ರವಾದ ಹಕ್ಕಿನ ಬುಡಕ್ಕೆ ಕೊಡಲಿ ಹಾಕುವ ಕಾರಣಗಳು ಅಲ್ಲದೆ ಬೇರೆ ಏನು? ಮಾನವೀಯತೆಗೆ, ಪ್ರಜಾಪ್ರಭುತ್ವಕ್ಕೆ ಮತ್ತು ಸ್ವಾತಂತ್ರ್ಯಕ್ಕೆ ಕೊಡಲಿ ಹಾಕುವುದು ನ್ಯಾಯವೇ? ನನ್ನ ವಿಷಯ ತೆಗೆದುಕೊಳ್ಳೋಣ, ಶ್ರೀ ಗೋಪಾಲಗೌಡರ ವಿಷಯ ತೆಗೆದುಕೊಳ್ಳೋಣ, ಎನ್.ಜಿ.ಒ. ಅವರೊಡನೆ ಯಾರಾದರೂ ಮಾತನಾಡಿದರೆ ಅವರು ಶಿಕ್ಷೆಗೆ ಅರ್ಹರಾಗುತ್ತಾರೆ. ಅವರ ಜೊತೆಗೆ ಚಾ ಕುಡಿದು ನಾನು ಜೈಲಿಗೆ ಹೋದರೆ ಶ್ರೀ ಸುಬ್ಬಯ್ಯ ನಾಯಕ್‌ರವರಿಗೆ ಸಂತೋಷ ಆದರೆ ನನಗೂ ಸಂತೋಷ. ಇಂತಹ ಪರಿಸ್ಥಿತಿ ಉಂಟೇ? ಎನ್.ಜಿ.ಒ.ಗಳು ಕೇರಳದಲ್ಲಿ ಇದ್ದ ಹಾಗೆ, ಮದ್ರಾಸಿನಲ್ಲಿಯೂ, ಮಧ್ಯ ಪ್ರದೇಶದಲ್ಲಿಯೂ, ಕಲ್ಕತ್ತಾದಲ್ಲಿಯೂ ಇಂಥ ದೊಡ್ಡ ಹೋರಾಟಗಳನ್ನು ಮಾಡಿದ್ದಾರೆ. ಅಂತಹ ಹೋರಾಟಗಳನ್ನು ಇಲ್ಲಿ ಮಾಡಿಲ್ಲ. ಎಷ್ಟೋ ಜನರು ಕೆಲಸದಿಂದ ಹೊರಗೆ ಬಂದಿದ್ದಾರೆ, ಒಂದು ಹೋರಾಟವನ್ನು ನಡೆಸಿದ್ದಾರೆ. ಆದರೆ ಅಲ್ಲಿ ಇಂಥ ಕಾನೂನು ಏನು ಇಲ್ಲ. ಇಲ್ಲಿ ನೀವು ತಂದಿದ್ದೀರಿ. ಅದು ಒಳ್ಳೆಯದು. ನಿಜವಾಗಿಯೂ ಇಲ್ಲಿ ಎನ್.ಜಿ.ಒ.ಗಳು ಸಂಘಟಿತರಾಗಿ ಕಾನ್‌ಷಸ್ ಆಗಿ ನಿರ್ಧಾರದಿಂದ ಒಂದು ಕಾರ್ಯಕ್ರಮವನ್ನು ನಿಮ್ಮ ಮುಂದೆ ಇಟ್ಟು ಅದನ್ನು ಪರಿಪಾಲಿಸಿದರೆ ಅವರನ್ನು ಸದೆಬಡಿಯಲಿಕ್ಕೆ ಇದು ಒಂದು ಕಾರಣ ಎಂದು ನನ್ನ ಅಭಿಪ್ರಾಯ. ಈರೀತಿ ಹೆಚ್ಚು ಸಮಯ ಆಳಲಿಕ್ಕೆ ಸಾಧ್ಯ ಆಗಲಿಕ್ಕಿಲ್ಲ. ಕೆಲವು ಸಮಯ ಆಳಬಹುದು. ಎಲ್ಲಾ ಜನತೆಯನ್ನೂ ಆ ರೀತಿಯಿಂದ ಪಾಶವೀ

ಶಕ್ತಿಯಿಂದ ಮರ್ದಿಸಿ ಪ್ರಜಾಪ್ರಭುತ್ವವನ್ನು ಬದಿಗೊತ್ತಿ ಹಿಟ್ಲರ್‌ಶಾಹಿಯಾಗಿ ಆಳುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವಕ್ಕೆ ದೂರ. ಮಹಾತ್ಮ ಗಾಂಧಿಯವರು ಹೇಳಿದ ದಾರಿ ಇದು ಅಲ್ಲ. ಒಂದು ದಿವಸ ಹೋರಾಟ ಮಾಡುವುದಕ್ಕೆ ನೀವು ಅದನ್ನು ಮೊಟಕುಮಾಡುವುದಕ್ಕೆ ಈರೀತಿ ಕಾನೂನು ತಂದರೆ, ದೊಡ್ಡ ಹೋರಾಟ ಮಾಡಿದರೆ ಏನು ಮಾಡುವಿರಿ? ನನ್ನ ವಿನಂತಿ ಏನೆಂದರೆ, ಜನತೆಯ ಸರ್ಕಾರ ಈರೀತಿ ಮಾಡುವುದು ಸರಿಯಲ್ಲ. ಇದನ್ನು ನೀವು ತರಬಾರದು ಎಂದು ಸರ್ಕಾರಕ್ಕೆ ಹೇಳುತ್ತೇನೆ. ಇಂತಹ ಒಂದು ಕಾನೂನನ್ನು ತರುವುದು ಪ್ರಜಾಪ್ರಭುತ್ವಕ್ಕೆ ಒಳಪಟ್ಟಿಲ್ಲ.

ಶ್ರೀ ಸಿ. ಜಿ. ಮುಕ್ಕಣಪ್ಪ.—ಸುಪ್ರೀಮ್ ಕೋರ್ಟು ಆ ಬಗ್ಗೆ ಹೇಳಿದೆಯಲ್ಲಾ?

ಶ್ರೀ ಎ. ಕೃಷ್ಣ ಶೆಟ್ಟಿ.—ಯಾವ ಕೋರ್ಟ್ ಒಂದು ವ್ಯಾಖ್ಯಾನ ಮಾಡುವುದಾದರೂ ಸಜೀವವಾದ ರೀತಿಯಲ್ಲಿ ವಾಖ್ಯಾನ ಮಾಡಬೇಕು. ಸುಪ್ರೀಂ ಕೋರ್ಟಿನಲ್ಲಿ ಒಂದು ತೀರ್ಮಾನವಾದರೆ ಸರ್ವ ಕಾಲಕ್ಕೂ ಅದನ್ನೇ ಪರಿಪಾಲಿಸಿಕೊಂಡು ಬರುವುದಕ್ಕೆ ಅಲ್ಲ. ಕಾನೂನು ಜನರಿಗಾಗಿ ಇರುವುದು. ಜನರು ಕಾನೂನಿಗೆ ಅಲ್ಲ. "Old order changeth yielding place to new; God fulfils himself in many ways let one custom should corrupt the world." ಕಾನೂನು ಆದರೆ ಎಲ್ಲಾ ಕಾಲಕ್ಕೂ ಬರುವುದಿಲ್ಲ. ಒಂದೊಂದು ಕಾಲಕ್ಕೆ ಬೇರೆ ಬೇರೆ ರೀತಿಯಲ್ಲಿ ಬರಬಹುದು. ಆದುದರಿಂದ ಈ ಕಾನೂನನ್ನು ಮಾಡಬಾರದು ಎಂದು ನನ್ನ ವಿನಂತಿ. ಎನ್.ಜಿ.ಓ.ಗಳನ್ನು ಪ್ರೀತಿಯಿಂದ ನೋಡಬೇಕು, ಅವರು ಸಂಘಟನೆಯ ಮೂಲಕ ಸರ್ಕಾರದ ಮುಂದೆ ಬೇಡಿಕೆಗಳನ್ನಿಟ್ಟರೆ ಅದನ್ನು ಪೂರೈಸಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಅಂತಹ ಅನುಕೂಲತೆಯನ್ನು ಸರ್ಕಾರ ಕಲ್ಪಿಸಿ ಕೊಡಬೇಕು. ಇದೆಲ್ಲಾ ಬಿಟ್ಟು ರಾವಣನ ಆಳ್ವಿಕೆಯ ರೀತಿಯಲ್ಲಿ ಮಾಡುವುದಾದರೆ ಅದು ಸರಿಯಲ್ಲ. ರಾಜ್ಯಕ್ಕೆ ಅದರಿಂದ ಯಶಸ್ಸಿಲ್ಲ, ಜನತೆಗೂ ಯಶಸ್ಸಿಲ್ಲ. ಈರೀತಿ ಹೋದರೆ ಜನತೆ ಅದನ್ನು ಸೈರಿಸಿ ಎಷ್ಟು ಮಾತ್ರಕ್ಕೂ ಕೂಡುವುದಕ್ಕೆ ಸಾಧ್ಯವಿಲ್ಲ. ಅವರ ಜೊತೆಗೆ ನಾವೆಲ್ಲರೂ ಜೈಲಿಗೆ ಹೋಗುವ ಪ್ರಶ್ನೆ ಬರುತ್ತದೆ. ಅದಕ್ಕೆ ಅವಕಾಶವನ್ನು ಒದಗಿಸಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಮರುಳಪ್ಪ (ಕಡೂರು).—ಮಾನ್ಯ ಅಧ್ಯಕ್ಷರೇ, ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಗೋಪಾಲಗೌಡರು ತಂದಿರತಕ್ಕ ನಿರ್ಣಯವನ್ನು ಅನುಮೋದಿಸುತ್ತೇನೆ ಮತ್ತು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಸ್ವಾಮಿ, ದೇಶದ ಜನತೆ ಪ್ರತಿದಿವವು ಕೂಡ ಈ ಸರ್ಕಾರ ತಮ್ಮನ್ನು ಎಷ್ಟು ಪ್ರೀತಿಯಿಂದ, ಆದರದಿಂದ ಮತ್ತು ಪ್ರೇಮದಿಂದ ಆಳುತ್ತಿದ್ದಾರೆ ಎಂದು ನೋಡುತ್ತಿದ್ದಾರೆ. ಅವರು ಚುನಾವಣಾ ಕಾಲದಲ್ಲಿಯಾಗಲಿ ಅಥವಾ ಸ್ವಾತಂತ್ರ್ಯವನ್ನು ಪಡೆಯತಕ್ಕಂಥಾ ಕಾಲದಲ್ಲಿಯಾಗಲಿ ಜನತೆಯ ಮುಂದೆ ನಿಂತು ಪ್ರಜಾ ಸರ್ಕಾರ ಬಂದಲ್ಲಿ ರೈತರ ಅಭಿವೃದ್ಧಿ, ವಿದ್ಯಾರ್ಥಿಗಳ ಅಭಿವೃದ್ಧಿ, ನೌಕರರುಗಳ ಅಭಿವೃದ್ಧಿ ಎಲ್ಲರ ಹಿತಚಿಂತನೆಯನ್ನೂ ಬಹಳ ಸುಲಭವಾಗಿ ಸಾಧಿಸುತ್ತೇವೆ ಎಂದು ಹೇಳುತ್ತಿದ್ದರು. ನೀವೆಲ್ಲರೂ ಕೂಡ ಬೆಂಬಲವನ್ನು ಕೊಟ್ಟು ಸ್ವರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೆ, ಸ್ವಾತಂತ್ರ್ಯವನ್ನು ಕಟ್ಟುವುದಕ್ಕೆ ಆಶೀರ್ವಾದ ಮಾಡಬೇಕು ಎಂದು ಹೇಳಿದರು. ಕೂಲಿಗಾರರು, ರೈತರು, ವಣಿಕರು ಮತ್ತು ವಿದ್ಯಾರ್ಥಿಗಳು ಇವರೆಲ್ಲರನ್ನೂ ಕೂಡ ಕೈಮುಗಿದು ಪ್ರಾರ್ಥಿಸಿಕೊಂಡು ತಮ್ಮ ಬೆಂಬಲವನ್ನು ಕೊಡಬೇಕೆಂದು ಸವಿನುಡಿಗಳನ್ನಾಡಿ ಇವೊತ್ತು ಇವರು ದೇಶಕ್ಕೆ ಜನತೆಗೆ ವಂಚನೆಯನ್ನು ಮಾಡಿದ್ದಾರೆ. ಅಧ್ಯಕ್ಷರೇ, ಇವೊತ್ತು ನನಗೆ ಆಶ್ಚರ್ಯವಾಗುತ್ತದೆ! ಸರ್ಕಾರಿ ನೌಕರರು ಆಫೀಸುಗಳಿಗೆ ಒಂದು ದಿವಸ ಕ್ಯಾಜುಯಲ್ ರಜಾವನ್ನು ಹಾಕುತ್ತೇವೆಂದು ಹೇಳಿದ್ದಾರೆ. ಅದು ಅವರ ಫಂಡಮೆಂಟಲ್ ರೈಟ್. ಅವರು ಕ್ಯಾಜುಯಲ್ ರಜಾವನ್ನು ಹಾಕುವುದಾದರೆ ಅದು ಒಂದು ಅಪರಾಧ ಎಂದು ಹೇಳಿ ಸರ್ಕಾರದವರು ಘೋಷಣೆ ಮಾಡಿದ್ದಾರೆ. ಇದರಲ್ಲಿ ಮೊದಲನೆಯದಾಗಿ ಸರ್ಕಾರಿ ನೌಕರರ ಫಂಡಮೆಂಟಲ್ ರೈಟ್ಸ್ ಅನ್ನು ಮೊಟಕು ಮಾಡಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರು ಹೊರಡಿಸಿರತಕ್ಕ ಆರ್ಡಿನೆನ್ಸ್‌ನ ಸೆಕ್ಷನ್ (5)ರಲ್ಲಿ ಯಾವ ಮನುಷ್ಯನು ಸರ್ಕಾರಿ ನೌಕರರನ್ನು ಮುಷ್ಕರ ಮಾಡುವುದಕ್ಕೆ ಪ್ರೇರೇಪಿಸುತ್ತಾನೆಯೋ ಅವನಿಗೆ ಒಂದು ವರ್ಷ ಸಜಾ ಮತ್ತು ಫೈನು ಹಾಕಬೇಕೆಂದು ಹೇಳಿದ್ದಾರೆ. ಈಗ ಸರ್ಕಾರಿ ನೌಕರರಿಗೆ ಸರ್ಕಾರದವರು ಕೊಡತಕ್ಕ ಸಂಬಳಕ್ಕೂ ಮತ್ತು ಈಗಿನ ಜೀವನ ವೆಚ್ಚಕ್ಕೂ ಬಹಳ ತಾರತಮ್ಯ ಇದೆ. ಅವರು ಸರಿಯಾಗಿ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಈಗಿನ ಜೀವನದ ವೆಚ್ಚದ ಪ್ರಕಾರ ಸರ್ಕಾರದವರು ಸರ್ಕಾರಿ ನೌಕರರಿಗೆ ಕೊಡತಕ್ಕ ಸಂಬಳ ಅವರ ಜೀವನಕ್ಕೆ ಸಾಲದು. ಆದ್ದರಿಂದ ಅವರು ಉಪವಾಸದಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಜೀವನಕ್ಕೆ ಬೇಕಾದ ಸಾಮಾನುಗಳ ಬೆಲೆಗಳು ಇಷ್ಟೊಂದು ಏರುವುದಕ್ಕೆ ಸರ್ಕಾರದವರು ಅವಕಾಶವನ್ನು ಕೊಡದೆ ಅವುಗಳ ಬೆಲೆಯನ್ನು ಸರಿಯಾಗಿ ನಿಗದಿ ಮಾಡಿಲ್ಲ. ನೌಕರರ ನಿತ್ಯಜೀವನಕ್ಕೆ ಬೇಕಾದ ಸಾಮಾನುಗಳನ್ನು ಸಕ್ರಮ

(ಶ್ರೀ ಜಿ. ಮರುಳಪ್ಪ)

ವಾದ ಬೆಲೆಗೆ ಕೊಟ್ಟಿದ್ದರೆ ಅವರು ಜಾಸ್ತಿ ಸಂಬಳವನ್ನು ಕೊಡಬೇಕೆಂದು ಕೇಳಿದ್ದರೆ ಅದು ತಪ್ಪಾಗುತ್ತಿತ್ತು. ಈಗ ಸರ್ಕಾರದವರು ನೌಕರರಿಗೆ ಕೊಡತಕ್ಕ ಸಂಬಳ ಅವರ ಜೀವನಕ್ಕೆ ಸಾಕಾಗುವುದಿಲ್ಲ. ಆದ್ದರಿಂದ ಅವರ ಬೇಡಿಕೆಗಳು ನ್ಯಾಯವಾಗಿವೆ. ಅವರು ತಮ್ಮ ನ್ಯಾಯಬದ್ಧವಾದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಾಗ ಸರ್ಕಾರದವರು ಅವುಗಳನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದರಿಂದ ಅವರು ಸಾಮೂಹಿಕ ರಜಾವನ್ನು ಹಾಕುತ್ತೇವೆ, ಸ್ಟ್ರೈಕ್ ಮಾಡುತ್ತೇವೆಂದು ಹೇಳಿದರು. ಈಗ ಯಾರು ಮೊದಲು ಸರ್ಕಾರಿ ನೌಕರರ ನ್ಯಾಯಬದ್ಧವಾದ ಹಕ್ಕುಬಾಧ್ಯತೆಗಳಿಗೆ ಅವಕಾಶವಿಲ್ಲದಂತೆ ಮಾಡಿ ಅವರು ಮುಷ್ಕರ ಹೂಡುವಂತೆ ಪ್ರೇರೇಪಿಸಿದರೋ ಅವರಿಗೆ ಮೊದಲು ಫೈನು ಮತ್ತು ಸಜಾವನ್ನು ವಿಧಿಸಬೇಕು. ಆ ರೀತಿ ಮಾಡಿದವರು ಯಾರು ? ಸರ್ಕಾರದವರು. ಆದ್ದರಿಂದ ಮೊದಲು ಮಂತ್ರಿಗಳು ಜೈಲಿಗೆ ಹೋಗಬೇಕು. ಇದನ್ನು ಅವರು ತಿಳಿದುಕೊಳ್ಳಬೇಕು. ಯಾರು ಸರ್ಕಾರಿ ನೌಕರರನ್ನು ಮುಷ್ಕರ ಹೂಡುವಂತೆ ಪ್ರೇರೇಪಿಸಿದರೋ ಅವರದು ಮೊದಲನೆಯ ತಪ್ಪು ಎಂದು ಹೇಳುವುದಾದರೆ ಮಧ್ಯಸ್ಥಗಾರರಾದ ನಾವು ಜೈಲಿಗೆ ಹೋಗಬೇಕೆ ? ಇಂಥಾ ಒಂದು ಮಸೂದೆಯನ್ನು ಈ ಸಭೆಯಲ್ಲಿ ತಂದು ಅದನ್ನು ಪಾಸು ಮಾಡುವುದಾದರೆ ದೇಶ ಉಳಿಯುತ್ತದೆಯೇ ? ಜನಗಳು ಬದುಕಿಕೊಳ್ಳುತ್ತಾರೆಯೇ ? ಸರ್ಕಾರಿ ನೌಕರರು ಯಾರಾದರೂ ಒಂದು ತಾಲ್ಲೂಕಿನಲ್ಲಿ ಒಂದು ಫಂಕ್ಷನ್ ಮಾಡಿದಾಗ ಅದರ ಅಧ್ಯಕ್ಷತೆಯನ್ನು ವಹಿಸಿದರೆ ಅಲ್ಲಿಗೆ ಕಾನ್‌ಸ್ಟೇಬಲ್ ಹೋಗಿ ಅವರನ್ನು ಅರೆಸ್ಟ್ ಮಾಡುತ್ತಾರೆ. ಸರ್ಕಾರಿ ನೌಕರರ ಸಂಬಂಧದಲ್ಲಿ ಭಾಗವಹಿಸಿದಂತಹ ಬೇರೆಯವರನ್ನು ಹಿಡಿಸಿದರೆ ನಾಳೆ ಚುನಾವಣೆ ಬಂದಾಗ ತಮಗೆ ಯಾರು ಯಾರು ಬೇಕೋ ಅವರನ್ನೆಲ್ಲಾ ಹಿಡಿಯ ಬಹುದು ಎಂದು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆಂದು ಕಾಣುತ್ತದೆ. ಜನಗಳ ಪ್ರೀತಿಯಿಂದ ರಾಜ್ಯವನ್ನು ಆಳುವುದಕ್ಕೆ ಶಕ್ತಿಯನ್ನು ಕಳೆದುಕೊಂಡ ಮೇಲೆ, ಜನತೆಯ ಪ್ರೀತಿಯನ್ನು ಕಳೆದುಕೊಂಡ ಮೇಲೆ ಇಂಥಾ ಶಾಸನವನ್ನು ಮಾಡಿದರೆ ಇದಕ್ಕೆ ದುರಾಡಳಿತದ ಕಾನೂನು ಅಥವಾ ಬೆಲೆಯಿಲ್ಲದ ಕಾನೂನು ಎಂದು ಕರೆಯೋಣವೇ ? ಇದು ನನಗೆ ಅರ್ಥವಾಗುವುದಿಲ್ಲ. ಈಗ ಇಲ್ಲಿ ನಮ್ಮ ಮಾನ್ಯ ಗೃಹ ಮಂತ್ರಿಗಳು ಇದ್ದಾರೆ. ಅವರು ಬಹಳ ಜಾಣರು, ನ್ಯಾಯವಾದಿಗಳು ಮತ್ತು ಬುದ್ಧಿವಂತರು. ಅವರ ಕಾಲದಲ್ಲಿ ಇಂಥಾ ಒಂದು ಮಸೂದೆಯನ್ನು ತಂದಿದ್ದಾರೆ ಎಂದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಅವರು ಇಂಥಾದ್ದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಹೀಗಿರುವಾಗ ಈಗ ಅವರು ಈ ಮಸೂದೆಯನ್ನು ಈ ಸಭೆಯಲ್ಲಿ ತರುವುದಕ್ಕೆ ಅವಕಾಶವನ್ನು ಕೊಟ್ಟಿರುವುದನ್ನು ನೋಡಿದರೆ ಇವರು ದೊಡ್ಡ ಜಾಣರು ಎಂದು ಕಾಣುತ್ತದೆ. ಏತಕ್ಕೆಂದರೆ ಅವರು ಈ ಸರ್ಕಾರವನ್ನು ಉರುಳಿಸಬೇಕು ಎಂದು ಹೇಳಿ ಈ ಮಸೂದೆಯನ್ನು ಇಲ್ಲಿ ತರುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಚುನಾವಣೆಯ ಕಾಲದಲ್ಲಿ ಇಂಥಾ ಒಂದು ಮಸೂದೆಯನ್ನು ತಂದರೆ ಇದರ ಪರಿಣಾಮದಿಂದ ತಮ್ಮ ಪಾರ್ಟಿಯವರ ಚುನಾವಣೆಯ ಮೇಲೆ ಒಂದು ದುಷ್ಪರಿಣಾಮವುಂಟಾಗುತ್ತದೆ. ಯಾವ ಪಾರ್ಟಿ ಅಧಿಕಾರಕ್ಕೆ ಬಂದು ಏನಾಗಬೇಕು ಎಂದು ಯೋಚನೆ ಮಾಡುವ ಜಾಣರು ಅವರು. ನಾನು ಅವರ ಹಿತದೃಷ್ಟಿಯಿಂದಲೂ ಮತ್ತು ಆಡಳಿತ ಪಕ್ಷದವರ ಹಿತದೃಷ್ಟಿಯಿಂದಲೂ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಪರಿಣಾಮ ದುಷ್ಪರಿಣಾಮವಾಗುತ್ತದೆ. ಇಂಥಾ ಕಾನೂನಿನಿಂದ ಜನತೆಯನ್ನು ಹೆದರಿಸುತ್ತೇವೆ, ಸರ್ಕಾರಿ ನೌಕರರ ಹಕ್ಕು ಬಾಧ್ಯತೆಗಳನ್ನು ಕಸಿದುಕೊಳ್ಳುತ್ತೇವೆ ಎಂದು ಸರ್ಕಾರದವರು ತಿಳಿದುಕೊಂಡಿದ್ದರೆ ಅದಕ್ಕಿಂತ ದಡ್ಡತನ ಮತ್ತೊಂದಿಲ್ಲ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಇಂಥಾದ್ದನ್ನು ಮಾಡಬಾರದು ಎನ್. ಜಿ. ಓ. ಗಳು ಒಂದು ಕಡೆ ಜೂನಿಯರ್ ಇಂಜಿನಿಯರುಗಳು ಒಂದು ಕಡೆ, ಸೂಪರ್ ವೈಜರುಗಳು ಒಂದು ಕಡೆ, ವಿಲೇಜ್ ಅಕೌಂಟೆಂಟುಗಳು ಒಂದು ಕಡೆ, ವಿದ್ಯಾರ್ಥಿಗಳ ಸಮಸ್ಯೆ ಒಂದು ಕಡೆ, ಹೀಗೆ ಒಂದರ ಮೇಲೊಂದು ಸಮಸ್ಯೆಗಳು ಉದ್ಭವವಾಗುತ್ತವೆ. ಆದ್ದರಿಂದ ಸರ್ಕಾರದವರು ಇದನ್ನು ಯೋಚನೆ ಮಾಡಬೇಕು. ಯಾವ ಕಾರಣಕ್ಕಾಗಿ ಈ ರೀತಿ ಆಗುತ್ತಿದೆ, ಅವರ ಬೇಡಿಕೆಗಳು ನ್ಯಾಯಬದ್ಧವಾದುವುಗಳೇ, ಅವರ ಹಕ್ಕು ಬಾಧ್ಯತೆಗಳೇನಿವೆ, ಈ ಸಮಸ್ಯೆಗಳನ್ನು ಯಾವರೀತಿ ಬಗೆಹರಿಸಬೇಕು ಎಂಬುದನ್ನು ಯೋಚನೆ ಮಾಡದೆ ಬರೀ ಹೇಳಿಕೆಗಳನ್ನು ಕೊಟ್ಟರೆ ಅವುಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರ ಮುಂದಿನ ಪರಿಣಾಮವೇನು ಎಂಬುದನ್ನು ಯೋಚನೆ ಮಾಡದೆ ಯಾರು ಮುಷ್ಕರಗಳನ್ನು ಮಾಡುತ್ತಾರೆ, ಅವರುಗಳಿಗೆಲ್ಲಾ ಇಂಥಾ ಒಂದು ಕಾನೂನು ಮಾಡಿ ಅವರನ್ನು ಹೆದರಿಸಿ ರಾಜ್ಯದ ಆಡಳಿತವನ್ನು ನಡೆಸುವುದು ಯಾವ ನ್ಯಾಯ ? ಎಷ್ಟು ದಿವಸಗಳವರೆಗೆ ಈ ರೀತಿ ಮಾಡುತ್ತೀರಿ ? ನೀವು ಈಗಲಾದರೂ ಮುನ್ನೆಚ್ಚರಿಕೆಯನ್ನು ಅರಿತುಕೊಳ್ಳದಿದ್ದರೆ ಇದರಿಂದ ದೇಶಕ್ಕೆ ದುಷ್ಪರಿಣಾಮಗಳಾಗುತ್ತವೆ. ಮುಂದಾಲೋಚನೆ ಇಲ್ಲದೆ ಈ ರೀತಿ ರಾಜ್ಯವನ್ನು ಆಳುತ್ತಾ

ಹೋದರೆ ನೀವು ಜಾಣರು ಎಂದು ಹೇಳುವುದಕ್ಕಾಗುವುದಿಲ್ಲ. ಮತ್ತು ರಾಜ್ಯವನ್ನು ಆಳುವುದಕ್ಕೆ ನಿಮಗೆ ಶಕ್ತಿ ಇದೆಯೇ ಎಂಬುದನ್ನು ಜನತೆ ಯೋಚನೆ ಮಾಡಬೇಕಾಗುತ್ತದೆ. ಈ ಕರಾಳ ಶಾಸನದ ಪರಿಣಾಮದಿಂದ ಅದರ ಫಲವನ್ನು ನೀವು ಉಣ್ಣದೇ ಬಿಡುವುದಿಲ್ಲ. ಇದನ್ನು ಬಗೆಹರಿಸಲು ನಿಮಗೇನಾದರೂ ಒಳ್ಳೆಯ ದಾರಿ ಇದ್ದರೆ ಅದನ್ನು ನಾನು ಅತ್ಯಂತ ಆದರದಿಂದ ಸ್ವಾಗತಿಸುತ್ತೇನೆ. ನಿಮ್ಮ ಆಡಳಿತದಲ್ಲಿ ಜನತೆಗೆ ಕಲ್ಯಾಣವಾಗಬೇಕು, ಮತ್ತು ಬಡ ನೌಕರರ ಗೋಳು ಪರಿಹಾರವಾಗಬೇಕು. ಈ ದೃಷ್ಟಿಯಿಂದ ನಾನು ನಿಮಗೆ ಹಿತವಾದವನ್ನು ಹೇಳುತ್ತೇನೆ. ಜನತೆಯನ್ನು ಮತ್ತು ನೌಕರರನ್ನು ಹೆದರಿಸುವುದಕ್ಕೆ ಕಾನೂನು ಮಾಡುವುದನ್ನು ಬಿಟ್ಟು ಅವರಿಗೆ ಸಹಾಯ ಮಾಡಿರಿ. ಈಗ ನೀವು ಅಧಿಕಾರದಲ್ಲಿದ್ದೇವೆಂದು ಯೋಚನೆ ಮಾಡಬೇಡಿ. ಮುಂದೆ ನಿಮ್ಮ ಗತಿ ಏನೆಂಬುದನ್ನು ಯೋಚನೆ ಮಾಡಿ. ವಿಧಾನಸೌಧದ ನಾಲ್ಕುಗೋಡೆಯೊಳಗೆ ಇದ್ದುಕೊಂಡು ಯೋಚನೆ ಮಾಡಬೇಡಿ. ಹೊರಗಡೆ ಇರತಕ್ಕಂಥ ಒಬ್ಬ ಸಾಮಾನ್ಯ ಮನುಷ್ಯನ ಮಟ್ಟದಲ್ಲಿ ನೀವು ಯೋಚನೆ ಮಾಡಿ. ನೀವು ಈ ಪದವಿಗೆ ಬರುವುದಕ್ಕಿಂತ ಮುಂಚೆ ಏನೇನು ಕಷ್ಟ ಇತ್ತು ಎಂಬುದನ್ನು ಯೋಚನೆ ಮಾಡಿ. ಕಾನೂನಿನ ಬಲ ಬಹಳ ದಿವಸ ಉಳಿಯುವುದಿಲ್ಲ. ನೀವು ಉಳಿಯಬೇಕಾದರೆ ಜನತೆಯ ಪ್ರೇಮದ ಬಲ ಬೇಕು. ಅದನ್ನು ನೀವು ಸಂಪಾದಿಸಿ ದೇಶವನ್ನು ಆಳಿ. ಆದ್ದರಿಂದ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಿ. ಇಲ್ಲದಿದ್ದರೆ ಇದರಿಂದ ಕೆಟ್ಟ ಪರಿಣಾಮವುಂಟಾಗುತ್ತದೆ ಎಂದು ಸರ್ಕಾರಕ್ಕೆ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

Mr. SPEAKER.—Sri R. S. Hegde.........

(Some other Hon'ble Members stood up).

4- 30 P. M.

It is not possible to give chance to everybody to speak on this Resolution. I will try to take a representative cross section.

Sri R. S. HEGDE (Honnawar).—Mr. Speaker, Sir, I oppose the resolution. Sir, the ordinance which is before us is purported to be discredited on the ground that sections 1 to 4 infringe the fundamental rights of a civil servant and sections 5 to 6 are a clog on the fundamental rights of a citizen to speak freely. Sir, in my submission, the above argument is most unsound and if it is carried to its logical conclusions, there will be nothing but disorder, chaos and confusion in all Governmental activities. I am fully fortified in my argument, as the interpretation of the fundamental rights and their scope with all reasonable restrictions came up before the Superme Court several times and on several occasions, and the principles have been laid down in a series of rulings and they will be the guiding lines to see whether the present piece of legislation infringes the so-called fundamental rights of a civil servant as well as the citizen. Sir, fundamental rights are explained in article 19 of the Indian Constithtion. Article 19 (1) (a) to (g) precisely defines the scope of the fundamental rights. Article 19 (2) to (6) deal with the reasonable restriction on the so-called fundamental rights enunciated in article 19. Reasonable restrictions on the execise of those fundamental rights are imposed in the interest of public order, in the interst of public safety, in the interest of decency, in the interest of morality and in the interest that there is no incitement to an offence. The restritions in the exercise of fundamental rights came for a decision before the Supreme Court, and I

(SRI R. S. HEGDE)

am quoting two cases—one in Gopalan *versus* the State of Madras, and the other Arunachalam *versus* the State of Madras—and the gist is given in the Constitution itself. Sir, it is stated:

> "There cannot be any such thing as absolute or uncontrolled liberty wholly freed from restraint for that would lead to anarchy and disorder. The possession and enjoyment of all rights are subject to such reasonable conditions as may be deemed to the governing authority of the country to be essential to the safety, health, peace, general order and morale of the community. Ordinarily every man has the liberty to order his life as he pleases, to say what he will, to go where he will, to follow any trade, occupation or calling at his pleasure and to do any other thing which he can lawfully do without let or hindrance by any other person. On the other hand, for the very protection of these liberties, the society must arm itself with certain powers. What the Constitution, therefore, attempts to do in declaring the rights of the people is to strike a balance between individual liberty and social control. Article 19 of the Constitution gives a list of individual liberties and prescribes in the various clauses the restraints that may be placed upon them by law so that they may not conflict with public welfare or general morality."

In the other case.

> "the expression 'reasonable restriction' seeks to strike a balance between the freedom guaranteed by any of the sub-clauses of clause (1) of article 19 and the social control permitted by any of the clauses (2) to (6). It connotes that the limitation imposed on a person in enjoyment of the right, should not be arbitrary or of an excessive nature, beyond what is required in the interests of the public. In order to be reasonable the restriction must have a reasonable relation to the object which the legislation seeks to achieve, and must not go in excess of that object."

These two rulings clearly enunciate the restrictions on the fundamental rights of a civil servant and also a citizen. Sir, in 1951, in the first amendment of the Constitution, a proviso was added to clause (2):

> "Nothing in sub-clause (a) of clause (1) shall affect the operation of any existing law, or prevent the State from making any law, in so far as such law imposes reasonable restrictions on the exercise of the right conferred by the said sub-clause in the interests of the security of the State, friendly relations with foreign States, public order, decency or morality, in relation to contempt of court, defamation or incitement to an offence."

So, limitations are placed on the freedom of speech by the first amendment of 1951 Atc. The First Amendment Act of 1951 enables the legislatures to impose restriction on the freedom of speech and expression on the following grounds, *i. e.*, in the interests of the security of the State, friendly relations with foreign States, public order, decency or morality in relation to contempt of court, defamation or incitement to an offence. Then, it is further clarified as follows based on the rulings:

> "In the interests of public order, the State may impose restrictions on the incitement of with-holding of services by public employees or by persons engaged in any employment which is essential for securing the public safety or for maintaining services essential for the life of the community."

From this point of view, this piece of legislation can be said to be only a reasonable restriction on the civil servant as well as the citizen. The present legislation is against those civil servants who strike work when they belong to the category of essential services and it is reasonable restriction as stated in clauses 2 to 6 of article 19.

Now, even with regard to those who instigate, there is no question of fundamental rights either. When once it is conceded that strike is an offence, then to instigate the offence, there cannot be any fundamental right at all. Therefore any penalty levied for the instigation or the incitement of the offence cannot be said to be an encroachment on the right of the citizen.

Sri K. LAKKAPPA.—If strike is an offence, in a democratic country, in what manner are you going to resolve their grievances ?

Mr. SPEAKER.—Hon'ble Member must first request him to yield. If he does not, he should not go on speaking.

Sri R. S. HEGDE.—When the strike is not in the interest of public safety, public good, as it is stated in clause 2 of the Ordinance, it would not be proper. This matter could be viewed from another point of view. We have got Directive Principles in the Constitution in Chapter IV. The State has got certain responsibilities and that is stated in articles 38 and 39 of the Constitution. When there is heavy responsibility on the State Government to maintain, to secure, protect effectively, as it were, the social order in which there will be political, social and economical justice, my contention is, this strike will be directly in conflict with the Directive Principles laid down in the Constitution.

Another important point I submit is, this legislature is not competent to sit in judgment on the constitutionality of the Act unless it is so patent on the face of the record. Then, if this House is to sit in judgment on the constitutionality of the Act which is not patent on the face of the record, then, we shall be assuming the function of the judiciary.

Finally, Sir, I want to submit that all political thinkers and great experts have agreed that if political democracy, if parliamentary

(SRI R. S, HEGDE)

democracy is to strive, then no community or class of servants should resort to those methods which are non-constitutional or extra-constitutional. There is a particular constitution and all the fights must be within the frame-work of the Constitution. If strikes, hunger-strikes, breach of order, disruption can force a decision, why should we have a Constitution ? That is what great people have stated.

(Sri S. Gopala Gowda interrupted)

Sri R. S. HEGDE.—I am only stating what great leaders have stated. What your own Swatantra party leader Sri C. R. has said has appeared in the Deccan Herald of previous Sunday.

Sri SIDDIAH KASHIMAT.—Sir, I object to this. They have not said that.

Sri R. S. HEGDE.—Sir, all methods which are extra-constitutional must come to a halt. I have got a cutting and I will give it if they want.

Sir, I am one of those who sympathise with the efforts of the N. G. Os. as far as their demands are concerned. They must be given a fair deal. A Commission is appointed to look into the grievances of the N. G. Os. Their efforts must be channelised through constitutional methods but not through methods which are unconstitutional or extra-constitutional. Thank you Sir.

Mr. SPEAKER.—Now, one hour is over; the Minister has to reply. According to the procedure, Sri Gopala Gowda has to speak. If all the members agree among themselves, I will allow one member and then call upon Sri Gopala Gowda. I cannot allow everybody.

HON'BLE MEMBERS.—Yes.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ನಮಗೆ ಐದು ವರ್ಷದ ಕೊನೆಯೊಳಗೆ ಇಂತಹ ಒಂದು ಆಶ್ಚರ್ಯಕರವಾದ ಮತ್ತು ಖೇದವನ್ನು ಉಂಟುಮಾಡತಕ್ಕ ಮಸೂದೆ ನಮ್ಮ ಮುಂದೆ ಬಂದಾಗ ಅದನ್ನು ಕೂಲಂಕಷವಾಗಿ ಚರ್ಚೆಮಾಡಿ ಅಭಿಪ್ರಾಯ ಕೊಡಲು ಸಮಯವಿಲ್ಲ ಎಂದರೆ ತುಂಬಾ ವ್ಯಥೆಪಡಬೇಕಾಗಿದೆ. ಆದರೂ ಚಿಂತೆ ಇಲ್ಲ. ತಾವು ಕೊಟ್ಟಿರುವ ವೇಳೆಯಲ್ಲಿ ನನ್ನ ಮನಸ್ಸಿನಲ್ಲಿ ಏನಿದೆ, ಜನತೆಯ ಅಭಿಪ್ರಾಯ ಏನಿದೆ ಎಂಬುದನ್ನು ಹೇಳುತ್ತೇನೆ. ಶ್ರೀಮಾನ್ ಮರುಳಪ್ಪನವರು ಮಾತನಾಡುವಾಗ ಅವರು ಬಹಳ ಲೈಟ್ ಹಾರ್ಟಿನಿಂದ ಮಾತನಾಡಿದರು ಎಂದು ಕಾಣುತ್ತದೆ. ಆದರೆ ಶ್ರೀಮಾನ್ ಆರ್. ಎಸ್. ಹೆಗ್ಗಡೆಯವರು ಮಾತನಾಡಿದ್ದನ್ನು ನೋಡಿದರೆ, ಅವರು ಇಂಡೊನೇಷ್ಯ ರಾಜ್ಯದಲ್ಲಿ ಇರುತ್ತಿದ್ದರೆ ಏನಾಗುತ್ತಿತ್ತೋ ಎಂದು ನನಗಾದರೂ ಅನಿಸುತ್ತದೆ. ಮಾನ್ಯ ಶ್ರೀ ಮರುಳಪ್ಪನವರು ಪ್ರಜಾಪ್ರಭುತ್ವ, ವಿಚಾರ ಮಾತನಾಡಿದಾಗ ಎಲ್ಲರೂ ನಕ್ಕರು. ಆದರೆ ಹಿಂದೆ ನೀವು ಏನು ಮಾಡಿದ್ದೀರಿ ? ವಿದ್ಯಾರ್ಥಿಗಳನ್ನು ಶಾಲಾ ಕಾಲೇಜುಗಳಿಗೆ ಹೋಗಬೇಡಿ ಎಂದು ಹೇಳಿದವರು ಯಾರು ? ಸರ್ಕಾರಿ ನೌಕರರನ್ನು ಕೆಲಸಕ್ಕೆ ಹೋಗಬೇಡಿ ಎಂದು ಹೇಳಿದವರು ಯಾರು ? ಮ್ಯಾಜಿಸ್ಟ್ರೇಟುಗಳ ಕುರ್ಚಿ ಎಳೆದು ಅವರ ಸ್ಥಾನದಲ್ಲಿ ಕುಳಿತವರು ಯಾರು ? ಆದರೆ ಇವತ್ತಿನ ದಿವಸ ಹೊಟ್ಟೆಗೆ ಅನ್ನ ಹಾಕಿ ಎಂದು ಕೇಳಿದರೆ ಅವರಿಗೆ ಕಾನೂನು ತೆಗೆದುಕೊಂಡು ಬಂಧನದಲ್ಲಿ ಇಡುತ್ತೇವೆ ಮತ್ತು ಇವರ ವಿಷಯದಲ್ಲಿ ಯಾರಾದರೂ ಅನುಕಂಪ ತೋರಿಸಿದರೆ ಅವರನ್ನು ಶಿಕ್ಷೆಗೆ ಒಳಪಡಿಸುತ್ತೇವೆಂದು ಹೇಳಿದರೆ, ಇದು ಯಾವ ಪ್ರಜಾಪ್ರಭುತ್ವ ? ಇದಕ್ಕೆ ಯಾವ ಕನ್ನಡ ಇಲ್ಲವೇ ಇಂಗ್ಲೀಷ್ ನಿಘಂಟಿನಲ್ಲಿ ಅರ್ಥ ಇದೆ, ಎಂದು ನಾನಾದರೂ ಕೇಳುತ್ತೇನೆ. ಹಿಂದೆ ಐ. ಸಿ. ಎಸ್. ಅಧಿಕಾರಿಗಳು ಇದ್ದರು. ಅವರಿಗಾದರೂ ಜನತೆಯ ಮೇಲೆ ಮಮತೆ ಇತ್ತು. ಚಳವಳಿ ನಡೆಸುವಂತಹ ಜನತೆಯ ವಿಷಯದಲ್ಲಿ ಒಂದು ಅನುಕಂಪವಿತ್ತು. ಪ್ರಜಾಪ್ರಭುತ್ವದಲ್ಲಿ ಮನೆ ಮನೆಗೆ

ಹೋಗಿ ಎತ್ತಿನ ಕತ್ತಿಗೆ ನಿಮ್ಮ ವೋಟನ್ನು ಹಾಕಿ ಎಂದು ಕೇಳಿಕೊಂಡು ಈಗ ಜನತೆಯನ್ನು ಗುಲಾಮರಂತೆ ಕಾಣುವುದಾದರೆ ಪ್ರಜಾಪ್ರಭುತ್ವಕ್ಕೆ ಇವತ್ತು ತರ್ಪಣ ಕೊಡುವುದು ಒಳ್ಳೆಯದು ಮತ್ತು ಇದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ಏಕೆಂದರೆ, ನಾವು ಯಾರನ್ನು ಸಂಕೋಲೆಯಿಂದ ಬಿಡಿಸಬೇಕೆಂದು ಹೇಳುತ್ತಿದ್ದೇವೋ, ಅಂಥವರನ್ನು ಈ ಕಾಂಗ್ರೆಸ್ ರಾಜ್ಯದಲ್ಲಿ, ಚಕ್ರವರ್ತಿಯನ್ನಾಗಿ ಮಾಡಿರುವಾಗ, ಅವರೇ ಜನತೆಯ ಮೇಲೆ ಇಂತಹ ಮಸೂದೆಯನ್ನು ತಂದು ಬಂಧಿಸಿದರೆ, ಕಾಂಗ್ರೆಸ್ಸನ್ನು ಸಂಕೋಲೆಯಿಂದ ಬಿಡಿಸಿದಂತಹ ಪುಣ್ಯವೆಲ್ಲಿ ? ಅದಕ್ಕೆ ಮುಕ್ತಿಯೆಲ್ಲಿ ಎಂದು ನಾನು ಇಲ್ಲಿ ಘಂಟಾಘೋಷವಾಗಿ ಕೇಳಬೇಕಾಗಿದೆ. ತಾವು ಹೇಳುವುದೇನೋ ನಿಜ, ಮುಷ್ಕರ ಮಾಡಬೇಡಿ ಎಂದು. ಆದರೆ ಹಿಂದೆ ಜಿಲ್ಲಾ ಕಛೇರಿಗಳ ಮೇಲೆ, ಮತ್ತು ಸರ್ಕಾರಿ ಕಛೇರಿಗಳ ಮೇಲೆ ನಮ್ಮ ಬಾವುಟವನ್ನು ಹಾರಿಸಿದವರು ಯಾರು ? ನಮ್ಮ ರಾಷ್ಟ್ರವನ್ನು ಪರಕೀಯರ 170 ವರ್ಷಗಳ ದಬ್ಬಾಳಿಕೆಯ ಆಡಳಿತದಿಂದ ಮುಕ್ತಗೊಳಿಸಿದವರು ಯಾರು ? ಆದರೆ ಇವತ್ತಿನ ದಿವಸ ಅಂತಹ ಜನತೆಯ ಮೇಲೆ ವಿರುದ್ಧವಾದ ರಾಜ್ಯಭಾರ ಮಾಡುತ್ತಿದ್ದೀರಿ. ಇವತ್ತಿನ ದಿವಸ ಹೊಟ್ಟೆಗೆ ಇಲ್ಲ, ಕೊಡಿ ಎಂದು ಕೇಳುತ್ತಿರುವಾಗ ನೌಕರರ ಹೊಟ್ಟೆಗೆ ಹೊಡೆಯಬೇಕೆಂದು ಪ್ರಯತ್ನ ಮಾಡುತ್ತಿದ್ದೀರಿ. ಅಂಥ ನೌಕರರು ಒಂದು ಚಳವಳಿ ನಡೆಯಬೇಕೆಂದು ಹೇಳಿದರೆ ತಪ್ಪು ಏನು, ಸ್ವಾಮಿ ? ಈಗ ಎನ್. ಜಿ. ಓ. ಗಳಿಗೆ ಮುಷ್ಕರ ಮಾಡಲು ದಾರಿ ತೋರಿಸಿದವರು ಯಾರು ? ಇದು ಯಾರು ಉಂಟು ಮಾಡಿದ್ದು ? ಡೆಲ್ಲಿಯಲ್ಲಿ ಕೂತು ಐ.ಸಿ.ಎಸ್., ಐ.ಎ.ಎಸ್. ಕ್ರಿಯೇಟ್ ಮಾಡಿದವರು ಯಾರು ? ಅವರಿಗೆ ಮೂರು ಸಾವಿರ, ನಾಲ್ಕು ಸಾವಿರ, ಐದು ಸಾವಿರ ಸಂಬಳಗಳನ್ನು ಕೊಟ್ಟವರು ಯಾರು ? ಒಟ್ಟಿನಲ್ಲಿ ಕಾಂಗ್ರೆಸ್ಸಿನವರು ಅಧಿಕಾರ ತೆಗೆದುಕೊಂಡ ಮೇಲೆ ದೊಡ್ಡ ಅಧಿಕಾರಿಗಳನ್ನು ತೃಪ್ತಿಪಡಿಸುವುದಕ್ಕಾಗಿ ಐ.ಎ.ಎಸ್., ಐ.ಸಿ.ಎಸ್. ಅಧಿಕಾರಿಗಳ ಸಂಬಳ ಜಾಸ್ತಿ ಮಾಡಿದ್ದಾರೆ. ಇದರಿಂದ ಏನಾಗಿದೆ ಎಂದರೆ, ಈ ಐ.ಸಿ.ಎಸ್ ಅಧಿಕಾರಿಗಳು ಕ್ಲಬ್ಬುಗಳಿಗೆ ಹೋಗಿ ಕುಡಿದು ತಿಂದು ಹಣ ಖರ್ಚು ಮಾಡುವುದಕ್ಕೆ ಮಾತ್ರ ಅನುಕೂಲವಾಗಿದೆ. ಸಣ್ಣ ಅಧಿಕಾರಿಗಳು ಅತೃಪ್ತಿಯಿಂದ ಇದ್ದಾರೆ. ಮೈಸೂರು ದೇಶದ ಸಾಮಾನ್ಯ ಜನತೆ, ನಮ್ಮ ರಾಷ್ಟ್ರದ ಜನತೆ ಯಾವ ರೀತಿ ಅತೃಪ್ತಿಯಿಂದ ಇದ್ದಾರೆ ಎಂಬುದನ್ನು ಇಂದು ಅಧಿಕಾರದಲ್ಲಿರತಕ್ಕಂಥ ಕಾಂಗ್ರೆಸ್ಸಿನವರು ಅವರಿಗೂ ಇವರಿಗೂ ತುಲನೆ ಮಾಡಿ ನೋಡಬೇಕು ಎಂದು ಹೇಳುತ್ತೇನೆ. ಇದರಲ್ಲಿ ಯಾರು ತಪ್ಪು ಮಾಡಿದ್ದಾರೆ ? ಶ್ರೀಮಾನ್ ಚೆನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ್ಗೆ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಸಂಬಳ ಯಾವ ಅಧಿಕಾರಿಗೂ ಇರಕೂಡದು ಎಂದು ಒಂದು ನಿರ್ಣಯ ಈ ಸಭೆಯಲ್ಲಿ ಒಪ್ಪಿದೆ. ಅದನ್ನು ಕಾರ್ಯಗತ ಮಾಡುವುದಕ್ಕೆ ನಿಮಗೆ ಶಕ್ತಿ ಇಲ್ಲ. ಆ ನಿರ್ಣಯವನ್ನು ಬಹುಮತದಿಂದ ಈ ಸಭೆಯಲ್ಲಿ ಅಂಗೀಕಾರ ಮಾಡಿದ್ದೀರಿ. ಈಗಲಾದರೂ ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಈ ಬಗ್ಗೆ ಏನ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಐ.ಸಿ.ಎಸ್. ಅಧಿಕಾರಿಗಳ ವಿಚಾರದಲ್ಲಿ ಕೇಂದ್ರ ಸರಕಾರದವರು ಕಣ್ಣು ಬಿಟ್ಟು ನೋಡಿಲ್ಲ ಎಂದು ಹೇಳುತ್ತೇನೆ. ಈ ದೊಡ್ಡ ಅಧಿಕಾರಿಗಳಿಗೆ ನಾವು ಕೊಡುವ ಸಂಬಳ ಇಷ್ಟೇ ಎಂದು ನಿಗದಿ ಮಾಡಬೇಕು. ಹೆಚ್ಚು ಸಂಬಳದ ಐ.ಸಿ.ಎಸ್. ಅಧಿಕಾರಿಗಳು ನಮಗೆ ಬೇಡ. ಬುದ್ಧಿವಂತಿಕೆಯಿಂದ ಕೆಲಸ ಮಾಡುವ ಕಡಿಮೆ ಸಂಬಳದ ಅಧಿಕಾರಿಗಳು ನಮಗೆ ಸಾಕು. ಇದನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕು. ಸಣ್ಣ ಸಂಬಳದ ಅಧಿಕಾರಿಗೆ ತಾಯಿ ತಂದೆ ಮಕ್ಕಳು ಇರತಕ್ಕ ದೊಡ್ಡ ಸಂಸಾರ ಇರುತ್ತದೆ. ತನ್ನ ವಾಸಕ್ಕಾಗಿ ಮನೆ ಕಟ್ಟಿಸಿಕೊಳ್ಳಲು ಒಂದು ಸೈಟ್ ಕೊಡಿ ಎಂದು ಅರ್ಜಿ ಹಾಕಿದರೆ ಅಂಥ ಎನ್.ಜಿ.ಓ. ಗೆ ಸೈಟ್ ದೊರೆಯುವುದಿಲ್ಲ. ಮೂರು ನಾಲ್ಕು ಸಾವಿರ ರೂಪಾಯಿ ಸಂಬಳದ ದೊಡ್ಡ ಅಧಿಕಾರಿಯು ಸೈಟಿಗೋಸ್ಕರ ಅರ್ಜಿ ಹಾಕಿದರೆ ಮಾರನೆಯ ದಿನ ಬೆಳಿಗ್ಗೆ ಅವನಿಗೆ ಸೈಟ್ ಸಿಕ್ಕುತ್ತದೆ. ಈ ರೀತಿಯಾದರೆ ಎನ್.ಜಿ.ಓ. ಗಳ ಮನಸ್ಸಿಗೆ ನೋವು ಆಗುವುದಿಲ್ಲವೇ ? ಇವರು ಸ್ಟ್ರೈಕ್ ಮಾಡಬಾರದು ಎಂದು ಹೇಳುವುದು ಸರಿಯಾದುದೇ ? ಆದುದರಿಂದ ಈ ವಿಚಾರವನ್ನು ಮಾನವೀಯತೆಯಿಂದ ಸಹಾನುಭೂತಿಯಿಂದ ನೋಡಬೇಕು. ಈ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ತಮ್ಮ ಸ್ಥಾನ ಭದ್ರ ಮಾಡಿಕೊಳ್ಳುವುದಕ್ಕಾಗಿ ಪಾಕಿಸ್ತಾನದ ಹಾಗೆ ಒಂದು ಗುಂಪು ಮಾಡಿಕೊಳ್ಳುತ್ತಾರೆ. ಮಿಲಿಟರಿ ಕಮಾಂಡರನ ಹಾಗೆ ಎಲ್ಲ ಅಧಿಕಾರ ತಮ್ಮ ಕೈಯಲ್ಲಿ ಇಟ್ಟುಕೊಂಡು ಎಲ್ಲರೂ ತಲೆ ಕೆಳಗಾಗುವಂತೆ ಮಾಡಬಹುದು. ಈ ರೀತಿ ಆಗದ ಹಾಗೆ ದಯವಿಟ್ಟು ನೋಡಬೇಕು ಎಂದು ಬಹು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇಂಥ ಕಾನೂನು ಮಾಡಿ ದೊಡ್ಡ ಅಧಿಕಾರಿಗಳ ಹಿಡಿತದಲ್ಲಿ ಎಲ್ಲವೂ ಇರುವ ಹಾಗೆ ಮಾಡದೆ ಸಣ್ಣ ಸಣ್ಣ ಅಧಿಕಾರಿಗಳಲ್ಲಿ ವಿಶ್ವಾಸ ಮೂಡುವಂತೆ ಮಾಡಬೇಕು. ಸಣ್ಣ ಅಧಿಕಾರಿಗಳು ಕೂಡ ಹೆಚ್ಚಿನ ದೇಶಭಕ್ತಿಯಿಂದ ಕೆಲಸ ಮಾಡುತ್ತಾರೆ. ಹಿಂದಕ್ಕೆ ಹನುಮಂತಯ್ಯನವರ ಕಾಲದಲ್ಲಿ ಪೋಲೀಸ್ ಸ್ಟ್ರೈಕ್ ಆಯಿತು. ಆಗ್ಗೆ ಕಾಂಗ್ರೆಸ್ಸಿಗರೇ ಅಧಿಕಾರದಲ್ಲಿದ್ದರು ಪೋಲೀಸ್ ಸ್ಟ್ರೈಕ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡಬೇಕು ಎಂದು ಇನ್‌ಸ್ಟಿಗೇಟ್ ಯಾರು ಮಾಡಿದರು ? ಅವತ್ತು ಹೇಳಿದವರು ನೀವೇ ಅಲ್ಲವೆ ? ಇದು ಬರವಣಿಗೆಯಲ್ಲಿ ಸಹ ಇದೆ. ಸ್ಟ್ರೈಕ್ ನಡೆದ ಮೇಲೆ ಸಹ ಹನುಮಂತಯ್ಯನವರ ಸರಕಾರ ಇಂಥ ಕಾನೂನು ತರಲಿಲ್ಲ. ಈಗ ಅಂಥ ಅಗತ್ಯ ಏನು ಇದೆ ? ಆದುದರಿಂದ ಸಣ್ಣ ಪುಟ್ಟ ನೌಕರರ ತಂಟೆಗೆ ಹೋಗಬೇಡಿ ಎಂದು ಹೇಳುತ್ತೇನೆ. ಒಂದು ಮಾತಿನಲ್ಲಿ ಹೇಳುವುದಾದರೆ ಜೇನು ಗೂಡಿಗೆ ಕೈ ಇಡಬೇಡಿ. ಕೈ ಇಟ್ಟದ್ದೇ ಆದರೆ ಸಹಸ್ರಾರು ಜೇನುಗಳು ಕೈ ಕಚ್ಚುತ್ತವೆ. ಆದಕಾರಣ ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕು ಮತ್ತು ಈ ಕಾನೂನನ್ನು ಬಿಟ್ಟು ಬಿಡಬೇಕು. ಹೊಟ್ಟೆಗೆ ಅನ್ನ ಕೊಡಿ, ಬಟ್ಟೆ ಕೊಡಿ, ಒಂದು ಸೈಕಲ್ ಕೊಡಿ, ವಾಸಕ್ಕೆ ಒಂದು ಮನೆ ಕೊಡಿ ಎಂದು ಕೇಳುವ ಬಡ ನೌಕರರ ಬಗ್ಗೆ ಸಹಾನುಭೂತಿ ಇರಲಿ. ಮಹಾ ಚುನಾವಣೆ ಹತ್ತಿರ ಬಂದಿದೆ. ಸ್ವಲ್ಪ ಯೋಚನೆ ಮಾಡಿ. ಐ.ಎ.ಎಸ್. ಅಧಿಕಾರಿಯ ಮನೆಯಲ್ಲಿ ನಿಮಗೆ ಮೂರು ಓಟು ಸಿಕ್ಕುವುದಾದರೆ ಎನ್ ಜಿ.ಓ. ಗಳಿಂದ ನೂರು ಓಟು ಸಿಕ್ಕುತ್ತವೆ. ನಿಮ್ಮ ಹಿತ ದೃಷ್ಟಿಯಿಂದ ಹೇಳುತ್ತೇನೆ. ಈ ಕಾನೂನು ಬಹಳ ಉಗ್ರವಾಗುತ್ತದೆ. ಇದರ ಬಿಸಿ ನಮಗೆ ತಟ್ಟುವುದಿಲ್ಲ. ಇದರ ಬಿಸಿ ನಿಮಗೇ ತಟ್ಟುತ್ತದೆ. ಇಂಥ ಕರಾಳ ಶಾಸನ ಜಾರಿಗೆ ತಂದು ಅತೃಪ್ತಿಗೆ ಒಳಗಾಗಬೇಡಿ. ಬೇಕಾದರೆ ನಾಲ್ಕು ತಿಂಗಳು ಕಾಲ ಕಾದು ನೋಡೋಣ. ಪೇ ಕಮಿಷನ್ ನೇಮಕ ಮಾಡಿದ್ದೀರಿ. ಅವರು ವಿಚಾರ ಮಾಡುತ್ತಾರೆ. ಅವರು ಹೇಗೆ ವಿಮರ್ಶೆ ಮಾಡುತ್ತಾರೆ ಎಂಬುದನ್ನು ತಿಳಿದುಕೊಂಡು ಒಂದು ತೀರ್ಮಾನಕ್ಕೆ ಬರೋಣ. ಕೊನೆಯ ಪಕ್ಷ ಚುನಾವಣೆಗಳು ಮುಗಿಯುವವರೆಗಾದರೂ ಸ್ವಲ್ಪ ಸಮಾಧಾನವಾಗಿ ಇರಿ. ಚುನಾವಣೆ ನಡೆದು ಮುಂದೆ ಬರತಕ್ಕ ಹೊಸ ಶಾಸನ ಸಭೆ, ಹೊಸ ಸಚಿವ ಮಂಡಲ ಇದನ್ನು ಯೋಚನೆ ಮಾಡುವುದಕ್ಕಾದರೂ ಅವಕಾಶ ಮಾಡಿ ಕೊಡಬೇಕೆಂದು ಹೇಳಿ ಇದನ್ನು ಸರ್ಕಾರದವರು ಸುದೀರ್ಘವಾಗಿ ಯೋಚನೆ ಮಾಡಬೇಕು. ಇದರ ಆಗುಹೋಗುಗಳಿಂದ ನಿಮಗೆ ಕೆಡುಕಾಗುತ್ತದೆ, ಇದರಿಂದ ಸರ್ಕಾರಿ ನೌಕರರ ಮೇಲೆ ದುಷ್ಪರಿಣಾಮವುಂಟಾಗುತ್ತದೆ, ಜನತೆಯ ದುಷ್ಪರಿಣಾಮವುಂಟಾಗುತ್ತದೆ. ಅದಕ್ಕೆಲ್ಲ ಅವಕಾಶ ಮಾಡಿ ಕೊಡಬಾರದೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

† **Sri M. V. RAMA RAO.**—Sri, I oppose this resolution and when the debate takes place on the Bill which has been placed before this House and the consideration of which has already been moved by me, I shall be able to indicate how the arguments that have been advanced in favour of this resolution are misconceived and are not in the interest of the officials on whose behalf so much sympathy is sought to be expressed on the floor of the House. It is in the interest of the public servants themselves that this enactment is necessary and it has been made by means of an ordinance because the Legislature was not in session at the time the situation was provoked. I do not propose to anticipate what I propose to say when the Bill is taken up for debate. I oppose this resolution and I request the House to reject the resolution.

† ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಬದಲು ಉತ್ತರ ಕೊಟ್ಟಂಥ ಮಾನ್ಯ ಗೃಹ ಸಚಿವರು ಮಸೂದೆ ಬರುತ್ತದೆ, ಅದರ ಮೇಲೆ ನನ್ನ ವಿಚಾರಗಳನ್ನು ಮಂಡಿಸುತ್ತೇನೆ; ಈಗ ಹೇಳತಕ್ಕದ್ದು ಏನೂ ಇಲ್ಲ, ನೀವು ನಿರ್ಣಯವನ್ನು ತಿರಸ್ಕರಿಸಬೇಕು ಎಂದು ತಮ್ಮ ಪಕ್ಷದ ಸದಸ್ಯರಿಗೆ ಆದೇಶವನ್ನು ನೀಡಿದ್ದಾರೆ. ಸಂಖ್ಯಾ ಬಲದ ಮೇಲೆ ನ್ಯಾಯವನ್ನು ನಿರ್ಣಯ ಮಾಡುತ್ತಿದ್ದೇವೆ ಎನ್ನುವುದು ಇವರ ತೀರ್ಮಾನ. ಒಳ್ಳೆಯದು. ಈಗ ಆಗುತ್ತಿರುವುದೂ ಹಾಗೇನೆ ; ಸಂಖ್ಯಾ ಬಲದ ಮೇಲೆ ಮತ್ತು ಬಲದ ಮೇಲೆ. ಬಲವೇ ನ್ಯಾಯ ಎನ್ನುವುದೇ ಸರ್ಕಾರದ ನೀತಿಯಾಗಿದೆ. ಅದನ್ನು ನಾವು ಅನುಭವಿಸುತ್ತಿದ್ದೇವೆ, ನೋಡುತ್ತಿದ್ದೇವೆ. ಅದರ ಬಗ್ಗೆ ನಾನು ವಿಷಾದ ಮಾತ್ರ ವ್ಯಕ್ತಪಡಿಸಬಹುದು, ಮತ್ತೆ ಏನನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಸ್ವಾಮಿ, ನನ್ನ ಈ ನಿರ್ಣಯ ರಾಜ್ಯಪಾಲರು ಯಾವ ಅಧ್ಯಾದೇಶವನ್ನು ಈ ಶಾಸನ ಸಭೆ ಅಧಿವೇಶನದಲ್ಲಿ ಇಲ್ಲದೆ ಇದ್ದಾಗ ತಮ್ಮ ಕಾನೂನು ಮಾಡುವ ಅಧಿಕಾರವನ್ನು ಉಪಯೋಗಿಸಿ ಕೊಂಡು ಹೊರಡಿಸಿದರೋ ಆ ಅಧ್ಯಾದೇಶವನ್ನು ಈ ಮಾನ್ಯ ಸಭೆ ಒಪ್ಪಬಾರದು, ತಿರಸ್ಕರಿಸಬೇಕು ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಮಾನ್ಯ ಕಾಂಗ್ರೆಸ್ ಸದಸ್ಯರಲ್ಲಿ ಒಂದು ವಿಶೇಷ ಮನವಿ ಯನ್ನು ನಾನು ಮಾಡಿಕೊಳ್ಳಬೇಕಾಗಿದೆ. 19 ವರ್ಷಗಳಿಂದ ಅಧಿಕಾರದಲ್ಲಿದ್ದು ಮತ್ತು ಅಧಿಕಾರ ಪಕ್ಷದಲ್ಲಿ ಈಚೆಗೆ ಸೇರಿರುವವರು ಕೂಡ, ಅವರಿಗೆ ತಮ್ಮ ಇತಿಹಾಸವೇ ಮರೆತುಹೋಗಿದೆ. ಈ ಇತಿ ಹಾಸವನ್ನು ಮಾನ್ಯ ಭಟ್ಕಳದ ಸದಸ್ಯರು ಓದುವುದು ಒಳ್ಳೆಯದು, to refresh his memory. ಮೂಲಭೂತ ಹಕ್ಕು ಎಂದರೆ ಏನು, ಮುಷ್ಕರ ಎಂದರೆ ಏನು, ಹೋರಾಟ ಎಂದರೆ ಏನು, ಸ್ವಾತಂತ್ರ ಎಂದರೆ ಏನು, ಇವುಗಳನ್ನೆಲ್ಲ ಅವರು ತಿಳಿದುಕೊಳ್ಳುವುದು ಅವರ ಹಿತದೃಷ್ಟಿಯಿಂದಲೂ ಒಳ್ಳೆ ಯದು, ದೇಶದ ಹಿತದೃಷ್ಟಿಯಿಂದಲೂ ಒಳ್ಳೆಯದು, ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದಲೂ ಒಳ್ಳೆಯದು, ರಾಜ್ಯಾಂಗದ ಹಿತದೃಷ್ಟಿಯಿಂದಲೂ ಒಳ್ಳೆಯದು. ಆದುದರಿಂದ ಇವನ್ನೆಲ್ಲ ತಿಳಿದು ಕೊಳ್ಳದೆ ಅಧಿಕಾರದ ಅಮಲಿನಲ್ಲಿ, ಕೈಯಲ್ಲಿ ಅಧಿಕಾರವಿದೆ, ಪೋಲೀಸ್ ಖಾತೆ ಇದೆ, ಮಿಲಟರಿ ಇದೆ, ಬಂದೂಕು ಇದೆ, ನಮಗೆ ಬಹು ಬಹು ಸಂಖ್ಯಾತರು ಕೈ ಎತ್ತುವವರಿದ್ದಾರೆ, ಎಂಬ ಈ ಒಂದೇ ಅಭಿಪ್ರಾಯದ ಮೇಲೆ ತಾವು ಪ್ರಜಾಪ್ರಭುತ್ವವನ್ನು ಹತ್ತಿಕ್ಕುತ್ತೇವೆ, ಚಳು ವಳಿಗಳನ್ನೆಲ್ಲ ಬಗ್ಗು ಬಡಿಯುತ್ತೇವೆ, ಮುಷ್ಕರ ಮಾಡುವವರನ್ನು ಮಾಡಿಸುವವರನ್ನು ನಾವು ತುಳಿಯುತ್ತೇವೆ ಎಂದು ಹೇಳುವುದೇ ಆದರೆ ಇದು ಪ್ರಜಾಪ್ರಭುತ್ವದ ಕೇಡುಗಾಲಕ್ಕೇ ಹೀಗೆ ನೀವು ವರ್ತಿಸುತ್ತಿದ್ದೀರಿ, ಪ್ರಜಾಪ್ರಭುತ್ವದ ಕೊನೆಗಾಲ ಇದು. ಯಾವ ಸಭ್ಯನೂ ಕೂಡ ತನಗೆ ಎಷ್ಟೇ ಅವಮಾನವಾಗಿದ್ದರೂ, ಅನ್ಯಾಯವಾಗಿದ್ದರೂ ಸರ್ಕಾರದ ಮುಂದೆ ಬಂದು, ನನಗೆ ಅನ್ಯಾಯವಾಗಿದೆ, ಅವಮಾನವಾಗಿದೆ ಎಂದು ಹೇಳಿಕೊಳ್ಳಲಾರದಂಥ ಪರಿಸ್ಥಿತಿಯನ್ನು ತಾವು ತಂದಿಡುತ್ತಿದ್ದೀರಿ. ಇದನ್ನು ಗಂಭೀರವಾಗಿ ತಾವುಗಳೆಲ್ಲ ಯೋಚನೆ ಮಾಡಬೇಕು. ಕಾಂಗ್ರೆಸ್ ಸದಸ್ಯರಲ್ಲಿ ನಾನು ಮನವಿ ಮಾಡಿಕೊಳ್ಳುವುದು ತಾವು ಹಗುರವಾಗಿ ಇದನ್ನು ಕಾಣಬಾರದು, ಇದು ಹಗುರವಾಗಿ ಕಾಣತಕ್ಕ ವಿಷಯವಲ್ಲ. ಏನೊಂದು ಅಧ್ಯಾದೇಶವನ್ನು ಹೊರಡಿಸಿದ್ದಾರೆ ಅದನ್ನು ಉತ್ಪ್ರೇಕ್ಷೆಯಿಂದ ಬಣ್ಣಿಸುತ್ತಿಲ್ಲ. ನಿಜವಾಗಿಯೂ 19 ವರ್ಷಗಳಲ್ಲಿ ಸರ್ಕಾರ ಮಾಡಿರತಕ್ಕ ಶಾಸನ ಗಳಲ್ಲಿ ಇದು ಅತ್ಯಂತ ಕರಾಳವಾದ ಶಾಸನ, ಮೂಲಭೂತ ಹಕ್ಕುಗಳ ಮೇಲೆ ಕೊಡಲಿ ಏಟನ್ನು ಹಾಕತಕ್ಕ ಶಾಸನ. ನಿಮ್ಮ ಕೆಲಸ ಮುಗಿಯಿತು. ಅವರು ಮುಷ್ಕರ ಮಾಡದಂತೆ ಅವರನ್ನು ಬೆದರಿಸಿದಿರಿ. ಆ ದಿನವೂ ಹೋಯಿತು. ನಿನ್ನೆಯ ದಿನ ಅವರೆಲ್ಲ ಸೇರಿ ಮೌನವಾಗಿ ಪೇ ಕಮೀಷನ್ ಒಪ್ಪುವುದಿಲ್ಲ ಎಂದು ಒಂದು ಪ್ರದರ್ಶನವನ್ನು ನಡೆಸಿದರು, ಇನ್ನೂ ಪ್ರದರ್ಶನವನ್ನು ನಡೆಸಿಕೊಂಡು ಹೋಗುತ್ತಾರೆ. ಇನ್ನು ಸ್ವಲ್ಪ ದಿವಸಗಳಲ್ಲಿ ಇಂಡಿಯಾ ದೇಶದಲ್ಲಿ ಇರತಕ್ಕ ಭಾರತದ ಎಲ್ಲ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರಗಳ ನೌಕರರು ತಮ್ಮ ಅತೃಪ್ತಿಯನ್ನು, ತಮ್ಮ ಅಸಮಾಧಾನ ವನ್ನು ಮತ್ತು ತಮ್ಮ ಬೇಡಿಕೆಗಳನ್ನು ದೇಶದ ಮುಂದೆ, ಜನತೆಯ ಮುಂದೆ, ಸರ್ಕಾರದ ಮುಂದೆ ಇಡುವುದಕ್ಕಾಗಿ ಮತ್ತೆ ನೇರವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ನಾನು ಇಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಯಾರಿಗಾದರೂ ಇದರ ಹಿಂದೆ ಯಾವುದೋ ಶಕ್ತಿ, ರಾಜಕೀಯ ಶಕ್ತಿ, ಕೈವಾಡಮಾಡಿ ಇಂಥ ಸರ್ಕಾರಗಳನ್ನು ಉರುಳಿಸುವುದಕ್ಕಾಗಿ ಸರ್ಕಾರಿ ನೌಕರರನ್ನು ಪರೋಕ್ಷವಾಗಿ ಬಳಸಿಕೊಳ್ಳುತ್ತಿದೆ, ಸಂಘಟಿಸಿಕೊಳ್ಳುತ್ತಿದೆ, ಎನ್ನುವ ಅಭಿಪ್ರಾಯವಿದ್ದರೆ ಅದು ತಪ್ಪು ಎಂದು ಮಾತ್ರ ನಾನು ಹೇಳುತ್ತೇನೆ. ಕಾರಣವೇನೆಂದರೆ, ಈ 19 ವರ್ಷದ ನಿರಂತವಾದ, ಅವಿರತವಾದ ತಪ್ಪು ಹೆಜ್ಜೆಗಳ ಪರಿಣಾಮವಾಗಿ ಇವತ್ತು ನೀವು ಈ ಪರಿಸ್ಥಿತಿಯನ್ನು ಎದುರಿಸುತ್ತಿ ದ್ದೀರೇ ಹೊರತು ಅದು ಯಾರೂ ಬುದ್ಧಿಪೂರ್ವಕವಾಗಿ ಎತ್ತಿ ಕಟ್ಟಿರತಕ್ಕ ಚಳುವಳಿಯಲ್ಲ. ಇದನ್ನು ತಾವು ವಿಚಾರ ಮಾಡಬೇಕು.

ನಾನು ತಮ್ಮಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ, ಈ ವಿಷಯದಲ್ಲ ಹಗುರವಾಗಿ ತೀರ್ಮಾನಕ್ಕೆ ತಾವು ಬರಬಾರದು, ಸಮಯ ತೆಗೆದುಕೊಳ್ಳಬೇಕು, ವಿಚಾರ ಮಾಡಬೇಕು. ನನ್ನ ನಿರ್ಣಯವನ್ನು ನಿಮ್ಮ ಕಡೆ ಹೆಚ್ಚು ಸಂಖ್ಯಾಬಲವಿರುವುದರಿಂದ ಪಾಸ್ ಆಗದ ಹಾಗೆ ಮಾಡಬಹುದು. ಆದರೆ ನಮ್ಮ ಮುಂದೆ ಬರಲಿರುವ ಮಸೂದೆ ಕಾನೂನು ಕಡತಕ್ಕೆ ಈ ಜನರ ಬಹುಮತದಿಂದ ಏರುವುದಾದ ಪಕ್ಷದಲ್ಲಿ ಶಾಸಕಾಂಗಕ್ಕೆ ಕಳಂಕವನ್ನು ತರುವುದಲ್ಲದೆ ರಾಜ್ಯದ ನೌಕರರ ಮೂಲಭೂತ ವಾದ ಹಕ್ಕುಗಳನ್ನು ಸಂಪೂರ್ಣವಾಗಿ ನಾಶಮಾಡುತ್ತದೆ. ಕೇವಲ ಇದು ನೌಕರರದು ಮಾತ್ರವಲ್ಲ, ಸ್ವತಂತ್ರ ಪ್ರಜೆಯ ಮೂಲಭೂತ ಹಕ್ಕನ್ನು ಮೊಟಕುಮಾಡತಕ್ಕ ಶಾಸನವಾಗಿದೆ. ಇದಕ್ಕೆ ಯಾರೂ ಬೆಂಬಲ ಕೊಡಬಾರದು, ಈ ಅಧಿನಿಯಮವನ್ನು ನೀವು ತಿರಸ್ಕರಿಸಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The question is :

"That this House disapproves the Mysore Civil Services (Prevention of Strikes) Ordinanee, 1966".

The Resolution was negatived.

Sri C. J. MUCKANNAPPA.—Sir, I press for a division)

(*Division Bell rang for two Minutes*)

Mr. SPEAKER.—The question is :

"That this House disapproves the Mysore State Civil services (Prevention of strikes) ordinance, 1966."

(The division was taken by requesting the Members for and against the Resolution to stand in their seats)

Mr. SPEAKER.—The result oft he division is as followes:
Ayes: 25, Noes: 65.

(*The Resolution was lost*)

MYSORE STATE CIVIL SERVICES (PREVENTION OF STRIKES) BILL, 1966.

(*Motion to consider*)

Sri M. V. RAMA RAO (Minister for Home) : Sir,.. ......

Sri K. H. RANGANATH.—I rise to a point of order. I had opposed the moving of the Bill under rule 71.

Mr. SPEAKER.—If the member wants he nan oppose. It members want to know the constitutional position, I am ready to help them with all the information. Let the Debate start.

†**Sri M. V. RAMA RAO.**—Sir, this is a Bill which seeks to replace the ordinance which had been issued earlier and is intended to provide for the prevention of strikes by civil servants of the State of Mysore. Hon'ble members of the House are aware that in this State as in some other State there have been organised attempts to tamper with the loyaty of Government servants and to instigate and incite them into behaving as if they were members not of the civil service but of a labour union. Ideas have been sought to be put into their heads and to make them believe that they have a position which is similar to the positian of the factory workers in industrial establishments who, on certain occasions, go on strikes in order to achieve